ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 39 ಸೆಪ್ಟಂಬರ್ 28, 1986 ಬೆಲೆ 1-00

ಒಳಗೇನಿದೆ?... ಪುಟ 3

* ಕರ್ನಾಟಕದ ಎರಡನೇ ಹಿಂದುಳಿದ ಆಯೋಗ: ಸಿ.ಪಿ.ಐ. (ಎಂ) ನಿಲುವು
* ಕರ್ನಾಟಕದ ಗ್ರಾಮಗಳು 7
* ಅಂತರ ರಾಷ್ಟ್ರೀಯ : ಅಲಿಪ್ತ ಇತಿಹಾಸದ ಹೆಗ್ಗುರುತು -ಹರಾರೆ ಸಮ್ಮೇಳನ 7
* ಸಾಂಸ್ಕೃತಿಕ ರಂಗ 2

ಪುರವಣಿ

* ಹೊಸ ಪ್ಯಾಕೇಟಿನಲ್ಲಿ ಹಳೇ ಸರಕು I
* ಹಳ್ಳಿ ಹಳ್ಳಿಗೆ ಹಬ್ಬಲಿ ನಮ್ಮ ರೈತ ಸಂಘದ ಬಳ್ಳಿ II—III
* ಕುಂದಾಪುರದ ಕೃಷಿ ಕಾರ್ಮಿಕರ ಹೋರಾಟ -ಒಂದು ನೆನಪು IV



ರೈತರ 'ವಿಧಾನ ಸೌಧ ಚಲೊ'

ವಿಶೇಷ ಪುರವಣಿ

ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ರಾಜ್ಯದ ಎಲ್ಲಾ ದಿಕ್ಕು ದಿಶೆಗಳಿಂದ ರೈತರು, ಕೃಷಿ ಕಾರ್ಮಿಕರು, ತಮ್ಮ ತುರ್ತು ಬೇಡಿಕೆಗಳ ಈಡೇರಿಕೆಗಾಗಿ ಸೆ. 29 ರಂದು ಧಾವಿಸಿ ಬರುತ್ತಿದ್ದಾರೆ. ಕೇಂದ್ರ ಸರ್ಕಾರ ಬಿರ್ಲಾ, ಟಾಟಾರಂತಹ ಸಾವಿರ ಕೋಟಿಗಳ ಒಡೆಯರ ಗುತ್ತೇದಾರಿ ಬಂಡವಾಳಗಾರರ ಪರವಾದ ನೀತಿಯನ್ನು ಅನುಸರಿಸುತ್ತಾ ಬಡ ಜನಗಳ ಬಾಳನ್ನು ಗೋಳು ಮಾಡಿರುವುದರಿಂದ ನೊಂದ ಜನ ಇವರು. ರಾಜ್ಯದ ಜನತಾ ಸರ್ಕಾರವೂ ಅನೇಕ ಘೋಷಣೆಗಳನ್ನು ಮಾಡಿ ಅದನ್ನು ಈಡೇರಿಸದೆ ಭೂ ಮಾಲಕರ ಪರವಾಗಿ ವರ್ತಿಸುತ್ತಿರುವುದರಿಂದ ದಿನ ದಿನವೂ ಬೇಯುತ್ತಿರುವ ಜನ ಇವರು. ಇವರ ಹೋರಾಟಕ್ಕೆ ಜಯ ಸಿಗಲಿ ಎಂದು "ಐಕ್ಯರಂಗ" ಹಾರೈಸುತ್ತದೆ.

ಈ ಮಹತ್ವದ ದಿನದಂದು "ಐಕ್ಯರಂಗ" ರೈತರಿಗೆ ಸಂಬಂಧಿಸಿದ ವಿಷಯಗಳ ಮೇಲೆ ರೈತರ ಸಂಘಟನೆಯನ್ನು ಬಲಗೊಳಿಸುವುದರ ಬಗ್ಗೆ ಒಂದು ವಿಶೇಷ "ಪುರವಣಿ" ಯನ್ನು ಹೊರ ತರುತ್ತಿದೆ. ಇದು ಸದುಪಯೋಗವಾಗಲಿ ಎಂದು ಆಶಿಸುತ್ತೇವೆ.

ಗೂರ್ಖಾ ಮುಖಂಡ ಘೀಸಿಂಗ್ ಯಾವುದನ್ನೂ ಮುಚ್ಚಿಡದೆ ಎಲ್ಲವನ್ನೂ ಬಹಿರಂಗವಾಗಿಯೇ ನಡೆಸಿದ್ದರೂ ಈ ಚಳುವಳಿ ರಾಷ್ಟ್ರ ವಿರೋಧಿ ಅಲ್ಲ ಎಂದು ಪ್ರಧಾನ ಮಂತ್ರಿಯವರಿಗೆ ಕಂಡಿರುವುದಾದರೆ ಅವರು ರಾಷ್ಟ್ರವನ್ನು ಆಳಲು ಅನರ್ಹರು.

-ಪಾಲಿಟ್ ಬ್ಯೂರೊ

ಪ್ರಧಾನಿಯ ಪ. ಬಂಗಾಲ ಸಂದರ್ಶನ-ಚುನಾವಣಾ ಸಂದರ್ಭ ಸಾಧಕತನ

ಪ್ರತ್ಯೇಕ ಗೂರ್ಖಾರಾಜ್ಯ ಸ್ಥಾಪಿಸುವ ಕುರಿತು ಚಳುವಳಿ ನಡೆಸುತ್ತಿರುವ ಗೂರ್ಖಾ ರಾಷ್ಟ್ರೀಯ ವಿಮೋಚನಾ ರಂಗದ ಕುರಿತು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಪಶ್ಚಿಮ ಬಂಗಾಲಕ್ಕೆ ಸಂದರ್ಶನವಿತ್ತಾಗ "ಬೇಜವಾಬ್ದಾರಿ ಮತ್ತು ಅಜಾಗರೂಕ" ಹೇಳಿಕೆಗಳನ್ನಿತ್ತಿರುವುದನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಪ್ರತ್ಯೇಕ ಗೂರ್ಖಾರಾಜ್ಯಕ್ಕಾಗಿ ನಡೆದಿರುವ ಚಳುವಳಿ ರಾಷ್ಟ್ರ ವಿರೋಧಿಯಲ್ಲೆಂಬ ರಾಜೀವ್ ಗಾಂಧಿಯವರ ಹೇಳಿಕೆ "ರಾಷ್ಟ್ರವಿರೋಧಿ" ಯಾಗಿದೆಂದು ಪಿ. ಬಿ. ಹೇಳಿದೆ. "ಭಾರತ ದೇಶದಿಂದ ಪ್ರತ್ಯೇಕಗೊಂಡು ಸ್ವತಂತ್ರ ರಾಜ್ಯವನ್ನಾಗಿ ಮಾರ್ಪಡಿಸುವ ದೇಶದ್ರೋಹಿಗಳ ಪ್ರತ್ಯೇಕತಾವಾದಿ ದೊಡ್ಡ ಒಳಸಂಚನ್ನು ಮುಚ್ಚಿಡುವ ರೀತಿಯಲ್ಲಿ ಪ್ರಧಾನ ಮಂತ್ರಿ ಹೇಳಿಕೆ ನೀಡಿದ್ದಾರೆಂದೂ ಅದು ಆರೋಪಿಸಿದೆ. ಕೇಂದ್ರ ಗೃಹ ಶಾಖೆಯಲ್ಲಿರುವ ದಸ್ತಾವೇಜುಗಳನ್ನು ನೋಡದೇನೆ ರಾಜೀವ ಗಾಂಧಿ ಹೇಳಿಕೆ

(8ನೇ ಪುಟ ನೋಡಿ)

ಶಾಂತಿಗಾಗಿ ಸಮುದಾಯ ಜಾತಾ

...ಸ್ಕೃತಿಕ ರಂಗ

"ನೂರು ಅಡಿಗಳಣ್ಣಾ, ಇದು ಬಣ್ಣದ ನಡೆಯಣ್ಣ ಅದು ಸಮರಕ್ಕೆ ತಡೆಯು, ಸಮುದಾಯದ ಈ ಕರೆಯು ...... ಚಿತ್ರಕಲಾಪಂಷತ್ತಿನ ಪ್ರಾಂಗಣದಲ್ಲಿ ಸಮುದಾಯದ 'ನೂರು ಅಡಿಗಳ ಬಣ್ಣದ ನಡೆ ಅಣು ಸಮರಕ್ಕೆ ಜನತೆಯ ತಡೆ' ಆರನೆಯ ಜಾತಾ ಉದ್ಘಾಟನೆಯಾಗುತ್ತಿತ್ತು. ಹಿನ್ನೆಲೆಯಲ್ಲಿ ಯುದ್ಧದ ಭೀಕರತೆಯನ್ನು ಸಾರುವ 120X4 ಅಡಿ ಉದ್ದದ ಬಣ್ಣ ಬಣ್ಣದ ಕ್ಯಾನ್‌ವಾಸ್ ಯುದ್ಧದ ಭೀಕರತೆಯನ್ನು ಬಿಚ್ಚಿಟ್ಟಿತ್ತು.

ರೇಗನ್ ಉಸಿರಾಡಿದರೆ ಸಾಕು ಜಗತ್ತಿನ ಉಸಿರು ನಿಲ್ಲುತ್ತದೆ. ಉದ್ದನೆಯ ಕಟ್ಟಡಗಳನ್ನು ಹಾಳು ಮಾಡುವುದಿಲ್ಲ ನ್ಯೂಟ್ರಾನ್ ಕೇವಲ ಚಿಲ್ಲರೆ ಜೀವವೊಂದನ್ನುಳಿದು ಎಂಬುದರ ಅರಿವಿದ್ದ ವಿಶ್ವಸಂಸ್ಥೆ 1986ರ ವರ್ಷವನ್ನು ವಿಶ್ವಶಾಂತಿ ವರ್ಷವೆಂದು ಘೋಷಿಸಿದ್ದರ ಹಿನ್ನೆಲೆಯಲ್ಲಿ ಯುದ್ಧದ ವಿರುದ್ಧ ಶಾಂತಿಯ ತುರ್ತನ್ನು ಜನರಿಗೆ ತಲುಪಿಸಲು ಸಮುದಾಯ ಬಣ್ಣಗಳ ನಡೆಯ ವಿಶಿಷ್ಟ ಜಾತಾ ಹಮ್ಮಿಕೊಂಡಿತ್ತು.

ಭೂಮಿಯ ಉಗಮದಿಂದ ಹಿಡಿದು ಅಣು ಸಮರ, ತಾರಾ ಸಮರದವರೆಗೆ ಬಿಚ್ಚಿ ಹೇಳುವ ಈ ಕಲೆಯ ಪ್ರದರ್ಶನವನ್ನು ಬೆಂಗಳೂರಿನಿಂದ ದಾವಣಗೆರೆಯವರೆಗೆ ಸುಮಾರು 60 ಸ್ಥಳಗಳಲ್ಲಿ ಏರ್ಪಡಿಸಲಾಗಿದೆ. ಈ ತೈಲಚಿತ್ರದ ಕಲಾವಿದರು ದಾವಣಗೆರೆಯ ಸೊಲಬಕ್ಕನವರ್ ಮತ್ತು ಕಂರಾಜು. ಸಾಮಾಜಿಕ ಬದುಕಿನ ಜ್ವಲಂತ ಸಮಸ್ಯೆಗಳನ್ನು ಚಿತ್ರ ಕಲೆಯ ಮೂಲಕ ಅಭಿವ್ಯಕ್ತಿಸುತ್ತಾ ಬಂದಿರುವ ಇವರು ರೈತ ಜಾತಾ, ಪರಿಸರ ರಕ್ಷಣೆ, ಮಹಿಳಾ ವಿಮೋಚನೆ, ಬರಡ ಸಮಸ್ಯೆಗಳನ್ನು ಕುಂಚ, ಬಣ್ಣಗಳ ಮೂಲಕ ಅಭಿವ್ಯಕ್ತಿಸುತ್ತಾ ಬಂದಿದ್ದಾರೆ. ರೆಕ್ಸೆನ್ ಮೇಲೆ ರಚಿಸಿದ ಈ ತೈಲ ಚಿತ್ರದಲ್ಲಿ ಕ್ಯೂಬಿಕ್, ಜಾನಪದ, ಇಂಪ್ರೆಸಿಸ್ಟ್ ಶೈಲಿಯನ್ನು ಬಳಸಿಕೊಳ್ಳಲಾಗಿದ್ದು ಈ ಚಿತ್ರ ರಚಿಸಲು 6 ತಿಂಗಳು ಶ್ರಮಿಸಿದ್ದಾರೆ.

ಈ ಚಿತ್ರದ ನಡೆಯ ಜೊತೆಯಲ್ಲಿಯೇ ಸಮುದಾಯ ಯುದ್ಧ ವಿರೋಧಿ ಗೀತೆಗಳನ್ನು ಹಾಡುವುದಲ್ಲದೆ ಪಾಬ್ಲೋ ನೆರೂಡರ 'ಜನತೆ' ಕವನ ಆಧಾರಿತ ಕಿರು ರೂಪಕವನ್ನು ಅಭಿನಯಿಸಿದರು.

ಪ್ರಾರಂಭದಲ್ಲಿ ಬೆಂಗಳೂರು ಸಮುದಾಯದ ಅಧ್ಯಕ್ಷರಾದ ಕೆ. ಮರಳುಸಿದ್ದಪ್ಪನವರು ಯುದ್ಧದ ಭೀಕರತೆಯನ್ನು ಬಣ್ಣಿಸಿದರು. ಕಲಾವಿದ ಹಡಪದ್ ತೈಲ ಚಿತ್ರವನ್ನು ಉದ್ಘಾಟಿಸಿದ ನಂತರದ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸೂರ್ಯನಾರಾಯಣ್ ರಾವ್ ರವರು ಮಾತನಾಡಿ ಹಳ್ಳಿಯ ಮೂಲೆಮೂಲೆಗಳಲ್ಲಿ ಯುದ್ಧ ವಿರೋಧಿ ಅಭಿಪ್ರಾಯ ಮೂಡಿಸಲು ಸಮುದಾಯ ನಡೆಸುತ್ತಿರುವ ಪ್ರಯತ್ನ ಶ್ಲಾಘನೀಯ. ಈ ಜನಪರ ಜಾತಾಕ್ಕೆ ಜನತಾ ಸರ್ಕಾರ ಎಲ್ಲಾ ರೀತಿಯ ಬೆಂಬಲ ನೀಡಬೇಕು ಎಂದು ಕರೆಯಿತ್ತರು. ಸಚಿವ ಅಬ್ದುಲ್ ನಜೀರ್ ಸಾಬ್, ಬಿ. ಕೆ. ಚಂದ್ರಶೇಖರ್ ಮಾತನಾಡಿದರು. ಸಮುದಾಯ ರಾಜ್ಯ ಸಮಿತಿಯ ಅಧ್ಯಕ್ಷ ಶರಣ ಮಾಲೀ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎಂ.ಜಿ. ವೆಂಕಟೇಶ್ ವಂದನೆ ಸಲ್ಲಿಸಿದರು. ಜಾತಾ ನವಂಬರ್ 5 ರಂದು ದಾವಣಗೆರೆಯಲ್ಲಿ ಸಮಾರೋಪಗೊಳ್ಳಲಿದೆ.

— ಜಿ. ಎನ್. ಮೋಹನ್

ಎಚ್. ಎಸ್. ಶಿವ ಪ್ರಕಾಶರ "ಮಹಾಚೈತ್ರ"

ಹೋರಾಟವೊಂದರ ನಿರಂತರತೆಯ ಸಂಕೇತ

ಹೆಚ್. ಎಸ್. ಶಿವಪ್ರಕಾಶ್ ಕನ್ನಡದ ಒಬ್ಬ ತರುಣ ಕವಿ ಮತ್ತು ನಾಟಕಕಾರ. 'ಮಿಲರೇಪ' ಮತ್ತು 'ಮಳೆ ಬಿದ್ದ ನೆಲದಲ್ಲಿ' ಎಂಬ ಅವರ ಎರಡು ಕಾವ್ಯ ಸಂಕಲನಗಳು ಪ್ರಕಟವಾಗಿವೆ. ರಂಗದ ಮೇಲೆ ಈಗಾಗಲೇ ಯಶಸ್ವಿಯಾಗಿರುವ ನಾಟಕ 'ಮಹಾಚೈತ್ರ' ವೂ ಇದೀಗ ಪ್ರಕಟವಾಗಿದೆ. ಹನ್ನೆರಡನೆಯ ಶತಮಾನದಿಂದ ಶಿವಶರಣರ ಚಳುವಳಿ ಈ ನಾಟಕದ ವಸ್ತು. ವೀರಶೈವ ಧರ್ಮದಂತಹ ಧಾರ್ಮಿಕ ಪಂಥಗಳು, ತಮ್ಮ ಕಾಲದ ಆಳುವ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟಗಳಾಗಿದ್ದವು. ಜಾತಿ ಸಮಾನತೆ, ಆಸ್ತಿ ಸಮಾನತೆ, ಹೆಣ್ಣು ಗಂಡುಗಳ ಲಿಂಗ ಸಮಾನತೆ, ಕಾಯಕಗಳ ಸಮಾನತೆಗಳು ಅವುಗಳ ಆದರ್ಶಗಳಾಗಿದ್ದವು. ಈ ಮತ ಪಂಥಗಳು 'ಪರದ' ಚಿಂತನೆ ಮಾತ್ರವೇ ಆಗಿರದೆ 'ಇಹ'ದ ಹೋರಾಟಗಳೂ ಆಗಿದ್ದವು. ಲೋಕ ಕಾರುಣ್ಯ, ಮಾನವ ಪ್ರೇಮ ಮತ್ತು ದುಡಿಮೆಯ ಘನತೆಗಳನ್ನು ಎತ್ತಿಹಿಡಿದ ಈ ಆಂದೋಲನಗಳು ಆಧ್ಯಾತ್ಮದ ವೇಷ ಕೊಟ್ಟು ಲೌಕಿಕದ ಹೋರಾಟಗಳಾಗಿದ್ದವು. ಅವುಗಳ ಇತಿ ಮಿತಿಗಳು ಏನೇ ಇರಲಿ ಅವು ನಿಜವಾದ ಅರ್ಥದಲ್ಲಿ ಜನತೆಯ ಹೋರಾಟಗಳು. ಶಿವಪ್ರಕಾಶರಿಗೆ ಈ ಹೋರಾಟಗಳ ಆಧ್ಯಾತ್ಮ ಮತ್ತು ಲೌಕಿಕ-ಎರಡೂ ಪ್ರಬಲ ಆಕರ್ಷಣೆಗಳಾಗಿವೆ. ಆದ್ದರಿಂದಲೇ ಪರಂಪರೆಯ ಜೊತೆ ಸಂಬಂಧವಿರಿಸಿಕೊಂಡು ಪ್ರತಿಗಾಮಿಯಾಗದೆ ಉಳಿಯುವುದು ಅವರಿಗೆ ಸಾಧ್ಯವಾಗಿದೆ.

ಶಿವಶರಣರ ಚಳುವಳಿಯ "ನಾಯಕ"ನಾಗಿದ್ದ ಬಸವ ರಂಗದಿಂದ ನಿರ್ಗಮಿಸಿದ ಮೇಲೂ ಕ್ರಾಂತಿ ಮುಂದುವರಿಯುತ್ತದೆ. ಮತ್ತು ಅದರ ಮುಂಚೂಣಿಯಲ್ಲಿ ಇರುವವರು 'ಕಾಯಕ'ದವರೇ ಹೊರತು "ನಾಯಕ"ರಲ್ಲ ಎಂಬುದು ನಾಟಕದ ತಾತ್ವಿಕ ಧೋರಣೆಯಾಗಿದೆ. ನಾಟಕ ಕೇವಲ ಇಷ್ಟೇ ಆಗಿದ್ದರೆ, ನಮಗಂತೂ ಅದು ಮಹತ್ವದ್ದಾಗಬೇಕಿಲ್ಲ. ಯಾಕೆಂದರೆ ನಮಗೆ ಈಗಾಗಲೇ ಗೊತ್ತಿರುವ ಸಂಗತಿ ಅದು. ನಾಟಕದ ವೈಶಿಷ್ಟ್ಯವಿರುವುದು, ಅದು ಬರವಣಿಗೆಯ ಬೂರ್ಜ್ವಾ ತಂತ್ರಗಳನ್ನೂ, ಚರಿತ್ರೆಯ ಕುರಿತ ಪ್ರತಿಗಾಮಿ ಗ್ರಹಿಕೆಗಳನ್ನೂ ಸಂಪೂರ್ಣವಾಗಿ ತಿರಸ್ಕರಿಸಿರುವುದರಲ್ಲಿ. ಎಂತಹ ಲೇಖಕನಿಗೂ ಇದು ಅತ್ಯಂತ ಕಷ್ಟದ ಕೆಲಸ ಎಂಬುದನ್ನು ನಾವು ಮರೆಯಕೂಡದು. ಕ್ರಾಂತಿಕಾರೀ ವಿಚಾರಗಳ ಲೇಖಕರು ಕೂಡಾ ಬೂರ್ಜ್ವಾ ಶೈಲಿ, ತಂತ್ರ ಮತ್ತು ಚಿಂತನೆಗಳಿಂದ ಬಿಡಿಸಿಕೊಳ್ಳಲು ಹೆಣಗಾಡಿ ಸೋತ ಉದಾಹರಣೆಗಳಿವೆ. ಚರಿತ್ರೆ ಎಂದರೆ ಬರೇ ನಾಯಕರುಗಳ ಸಾಧನೆಗಳ ದಾರಾವಾಹಿ ಅಥವಾ ಒಂದು ಸಿದ್ಧವಸ್ತುವಿನಂತೆ ಚರಿತ್ರೆಯನ್ನು ಪುನರ್‌ರೂಪಿಸಬಹುದು, ಮರುಕಳಿಸಬಹುದು. (ಇದೇ ಅಲ್ಲವೆ ಆರ್. ಎಸ್. ಎಸ್.ನವರ ಮೂಲಾಧಾರ ತತ್ವ?) ಎಂಬಂತಹ ಪ್ರತಿಗಾಮಿ ಕಲ್ಪನೆಗಳಿಂದ ಬಿಡಿಸಿಕೊಳ್ಳುವುದಂತೂ ಇನ್ನಷ್ಟು ಕಷ್ಟದ ಕೆಲಸ. ಶಿವಪ್ರಕಾಶರ ನಾಟಕದಲ್ಲಿ ಶೈಲಿಯ ಮತ್ತು ಚಿಂತನೆಯ ಈ ಯಾವ ಅನರ್ಥವೂ ಕಾಣಿಸದು. ಆಧುನಿಕ ಕನ್ನಡ ಬರವಣಿಗೆಯಲ್ಲಿ ರೂಢಿಯಲ್ಲಿರುವಂತೆ, 12ನೆಯ ಶತಮಾನದ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸುವ ಗೋಜಿಗೆ ಅವರು ಹೋಗುವುದಿಲ್ಲ. ಶಿವಪ್ರಕಾಶರಿಗೆ, ಶರಣರ ಚಳುವಳಿ ಚರಿತ್ರೆಯುದ್ದಕ್ಕೂ ನಿರಂತರವಾಗಿ ನಡೆದುಕೊಂಡು ಬಂದ ಹೋರಾಟದ ಒಂದು ಸಂಕೇತವಾಗಿ ಕಂಡಿದೆ. ನಾಟಕದಲ್ಲಿ ಅದರ ಚಿತ್ರಣವಿರುವುದಾದರೂ ಹಾಗೇನೇ. ಈ ಕಾರಣದಿಂದಲೇ ಮಹಾಚೈತ್ರದ ಶೈಲಿ, ಬ್ರೆಕ್ಟನ ಎಪಿಕ್ ಶೈಲಿಯನ್ನು ಮತ್ತೆ ಮತ್ತೆ ನೆನಪಿಸುತ್ತದೆ. [ಬ್ರೆಕ್ಟ್ ಕೂಡಾ ವಾಸ್ತವವಾದೀ ನಿರೂಪಣೆಯನ್ನು ತಿರಸ್ಕರಿಸಿಯೇ ತನ್ನ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದ. ಚರಿತ್ರೆಯ ದ್ವಂದ್ವಾತ್ಮಕ ಸಂಕೀರ್ಣತೆಯನ್ನು ಸಂಯಾಗಿ ಗ್ರಹಿಸುವ ಒಂದು ವಿಧಾನವಾಗಿ ಆತ ತನ್ನ ನಾಟಕ ಶೈಲಿಯನ್ನು ಬಳಸಿಕೊಂಡ.]

— ಜಿ. ರಾಜಶೇಖರ

ಹರ್ಬರ್ಟ್‌ಸನ್ಸ್ ಇಂಡಿಯಾದಲ್ಲಿ

ಯಶಸ್ವಿ ಮುಷ್ಕರ – ವೇತನ ಒಪ್ಪಂದ

ಪ್ರಸಿದ್ಧ ಗುತ್ತೇದಾರಿಯಾದ ಗೋಯೆಂಕಾನಿಗೆ ಸೇರಿದ ಹರ್ಬರ್ಟ್‌ಸ್ ಇಂಡಿಯಾದಲ್ಲಿ ಆಗಸ್ಟ್ 4 ರಿಂದ 27ರ ವರೆಗೂ 24 ದಿನಗಳ ಕಾಲ ಮುಷ್ಕರ ನಡೆದು ಮಾಲೀಕ ವರ್ಗ ಉತ್ಪಾದನೆಗೆ ಜೋಡಿಸಿದ ಸಂಬಳ ಎಂಬ ತತ್ವವನ್ನು ಕಾರ್ಮಿಕರ ಮೇಲೆ ಹೇರ ಬಯಸಿದ್ದನ್ನು ಹಿಮ್ಮೆಟ್ಟಿಸಿ ಇದೀಗ ತಾನೆ ವೇತನ ಒಪ್ಪಂದವಾಗಿದೆ. ಸುಮಾರು ಆರು ತಿಂಗಳಿಂದ ಬೇಡಿಕೆಗಳ ಪಟ್ಟಿ ಸಲ್ಲಿಸಿ, ಕಪ್ಪು ಪಟ್ಟಿ ಧರಿಸಿ, ಧರಣಿ ಸತ್ಯಾಗ್ರಹ ನಡೆಸಿದರೂ ಮಾಲೀಕ ವರ್ಗ ಮಣಿಯದೆ ಸಿ. ಐ. ಟಿ. ಯು. ನೀತಿಗೆ ವಿರೋಧವಾದ ಉತ್ಪಾದನೆಗೆ ಜೋಡಿಸಿದ ಸಂಬಳ (Productivity Linked wages) ಎಂಬ ನೀತಿಯನ್ನು ಹೇರಲು ಪ್ರಯತ್ನಿಸಿತು. ಕೊನೆಗೆ ಮುಷ್ಕರಹೂಡಿ ಕಾರ್ಮಿಕರು ನೂರಕ್ಕೆ ನೂರು ಪಾಲು ಐಕ್ಯತೆಯನ್ನು ಪ್ರದರ್ಶಿಸಿದ ನಂತರ 150 ರೂ ಹೆಚ್ಚಳದ ವೇತನ ಒಪ್ಪಂದಕ್ಕೆ ಸಹಿ ಮಾಡುವುದು ಅನಿವಾರ್ಯವಾಯಿತು.

50 ರೂ. ವೇತನ ಹೆಚ್ಚಳ, ಉತ್ಪಾದನೆಗಾಗಿ ಉತ್ತೇಜನ, ಇವುಗಳ ಜೊತೆಗೆ ಮುಷ್ಕರ ಅವಧಿಗೆ ಶೇ 25 ರಷ್ಟು ವೇತನವನ್ನೂ ಕೊಡಲು ಒಪ್ಪಿದೆ. ಮುಂದಿನ ಮೂರೂವರೆ ವರ್ಷಗಳಿಗಾಗಿ ಇರುವ ಈ ವೇತನ ಒಪ್ಪಂದದಲ್ಲಿ ಮುಂದಿನ ವರ್ಷ 25ರೂ ಹೆಚ್ಚಳದ ಜೊತೆಗೆ 20 ರೂ ವಿಶೇಷ ಸಂಬಳದ ಅನುಕೂಲವೂ ಇದೆ.

ಕಾಲೇಜು ಸ್ವಾಯತ್ತತೆ ನಿಯಮಾವಳಿ ತಿರಸ್ಕೃತ

ಕೇಂದ್ರ ಸರ್ಕಾರ ದೇಶದಾದ್ಯಂತ ಜನ ವಿರೋಧಿ ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಆರಂಭಿಸಿದ್ದು ಈ ಕಾರ್ಯಕ್ರಮದನ್ವಯ ಮಂಗಳೂರು ವಿ. ವಿ. ಸಿಂಡಿಕೇಟ್ 'ಕಾಲೇಜು ಸ್ವಾಯತ್ತತೆ ಕರಾಳ ಮಸೂದೆ' ಜಾರಿ ಮಾಡಲು ಪ್ರಯತ್ನಿಸಿತು.

ಈ ಕರಾಳ ಕಾಯಿದೆ ಪ್ರಕಾರ ತಮ್ಮದೇ ಆದ ಪಠ್ಯಕ್ರಮ, ವಿದ್ಯಾರ್ಥಿ–ಅಧ್ಯಾಪಕರ ನೇಮಕಾತಿ ಹಾಗೂ ವಿಚಾರಣೆಯಿಲ್ಲದೆ ಏಕಾಏಕಿ ಕಿತ್ತುಹಾಕುವುದು ಇಂತಹ ಅಪಾಯಕಾರಿ ಸ್ವಾಯತ್ತತೆಯ ನಿಯಮದ ವಿರುದ್ಧ ಜಿಲ್ಲೆಯಲ್ಲಿ ಪ್ರಥಮವಾಗಿ ಎಸ್. ಎಫ್. ಐ. ಪ್ರತಿಭಟಿಸಿತಲ್ಲದೆ, ನಿಯಮಾವಳಿ ಅಂಗೀಕಾರ ಮಾಡಬೇಕಾಗಿದ್ದರೆ ಅಕ್ಯಾಡೆಮಿಕ್ ಕೌನ್ಸಿಲ್ ಸಭೆಯ ದಿನದಂದು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಕೌನ್ಸಿಲ್ ಸಭೆಯ ಮುಂಚಿತವಾಗಿ ವಿ. ವಿ. ಉಪಕುಲಪತಿಯನ್ನು ಘೇರಾವ್ ಮಾಡಿ ಮನವಿಯನ್ನು ಅರ್ಪಿಸಲಾಯಿತು. ಕೌನ್ಸಿಲ್ ಸಭೆಯಲ್ಲಿ ಈ ನಿಯಮಾವಳಿ ತಿರಸ್ಕೃತವಾಯಿತು. ಇದು ಪ್ರಜಾಸತ್ತಾತ್ಮಕ ಮೌಲ್ಯಗಳ ಜಯವೆಂದು ಎಸ್.ಎಫ್.ಐ. ದ.ಕ. ಜಿಲ್ಲಾ ಸಮಿತಿ ಹೇಳಿದೆ.

ಮಂಗಳೂರು ವಿಶ್ವ ವಿದ್ಯಾನಿಲಯ

ಕಾಲೇಜು ಸ್ವಾಯತ್ತತೆ ನಿಯಮಾವಳಿ ತಿರಸ್ಕೃತ

ರಾಜೀವ್‌ಗಾಂಧಿಯವರ ಹೊಸ ಶಿಕ್ಷಣ ನೀತಿಯ ಒಂದು ಅಂಗವಾದ ಕಾಲೇಜು ಸ್ವಾಯತ್ತತೆಯನ್ನು ಜಾರಿಗೆ ತರಲು ತೀವ್ರ ಉತ್ಸಾಹ ತೋರಿಸಿದ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ತೀವ್ರ ಮುಖಭಂಗವಾಗಿದೆ. ವಿ. ವಿ. ಆಡಳಿತ ಮುಂದಿಟ್ಟ ಪ್ರಸ್ತಾಪಕ್ಕೆ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಹಾಜರಿದ್ದ 39 ಸದಸ್ಯರ ಪೈಕಿ 11 ಮತಗಳು ಮಾತ್ರ ಬಿದ್ದಿವೆ. ಎಸ್. ಎಫ್. ಐ. ಉಪಕುಲಪತಿಗಳನ್ನು ಘೇರಾವ್ ಮಾಡಿದ್ದೇ ಅಲ್ಲದೆ ನಡೆಸಿದ ವ್ಯಾಪಕ ಪ್ರಚಾರ ಒಂದು ಮುಖ್ಯ ಕಾರಣ. ಇದರ ಜೊತೆಗೆ "ಮುಂಗಾರು" ಪತ್ರಿಕೆಯಲ್ಲಿ ನಡೆದ ಓದುಗರ ಪತ್ರ ಮಾಲೆಯಲ್ಲಿ ಬಹಳ ಜನ ಓದುಗರು, ಕಾಲೇಜು ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿ ಈ ಕಾಲೇಜು ಸ್ವಾಯತ್ತತೆಯನ್ನು ತೀವ್ರವಾಗಿ ವಿರೋಧಿಸಿದರು.

ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಒಂದು ವಿಷಯವೆಂದರೆ ಇಡೀ ದ. ಕ. ಜಿಲ್ಲೆಯ ತುಂಬಾ ತುಂಬಿರುವುದು ಖಾಸಗಿ ಕಾಲೇಜುಗಳೇ ಎಂಬುದು. ಇಡೀ ಜಿಲ್ಲೆಯಲ್ಲಿ ಮೊನ್ನೆ ಮೊನ್ನೆಯವರೆಗೂ ಇದ್ದದ್ದು ಕೇವಲ ಒಂದೇ ಸರ್ಕಾರಿ ಕಾಲೇಜು, ಉಳಿದ ಮೂರು ಸರ್ಕಾರಿ ಕಾಲೇಜುಗಳು ಇತ್ತೀಚೆಗೆ ಆರಂಭವಾಗಿದ್ದು.

ಹಾಗಾದರೆ ಸ್ವಾಯತ್ತತೆಯಿಂದ ಯಾರಿಗೆ ಪ್ರಯೋಜನ ? ಈ ಖಾಸಗಿ ಕಾಲೇಜುಗಳು ತಾವೇ ಒಂದು ವಿಶ್ವ ವಿದ್ಯಾನಿಲಯವಾಗುವಷ್ಟು ಖಾಸಗಿ ಕಾಲೇಜುಗಳ ಮೇಲೆ ಸಾಮ್ಯಹೊಂದಿರುವ ಖಾಸಗಿ ಶಿಕ್ಷಣದ ಗುತ್ತೇದಾರಿ ಸಂಸ್ಥೆಗಳಿಗೆ. ದ. ಕ. ಜಿಲ್ಲೆಯಲ್ಲಿರುವ ಅಸಂಖ್ಯ ಖಾಸಗಿ ಕಾಲೇಜು ವಿದ್ಯಾ ಸಂಸ್ಥೆಗಳಲ್ಲಿ ಬಹುಪಾಲು ಕ್ರಿಶ್ಚಿಯನ್ ಸಂಸ್ಥೆಗಳಿದ್ದು ಹಾಗೂ ಪೈಗಳ ಮಣಿಪಾಲ ಶಿಕ್ಷಣ ಸಂಸ್ಥೆಗೆ ಸೇರಿದ್ದು.

ಸ್ವಾಯತ್ತತೆ ಎಂದರೇನು ? ಈ ಕಾಲೇಜುಗಳ ಆಡಳಿತದ ಮೇಲ್ಕೆ ವಿಶ್ವ ವಿದ್ಯಾನಿಲಯದ ನಿಯಂತ್ರಣ ತಪ್ಪಿ ಖಾಸಗಿ ಆಡಳಿತ ಮಂಡಳಿಗಳ ಆಟಕ್ಕೆ ಅಂಕುಶವೇ ಇಲ್ಲದಂತಾಗುವುದು. ಇದರಿಂದ ನಷ್ಟವಾಗುವುದು ಯಾರಿಗೆ? ಅಲ್ಲಿಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ. ಅದ್ದರಿಂದ ಅವರು ಪ್ರತಿಭಟಿಸುವುದು ಸ್ವಾಭಾವಿಕವೇ.

ಹೊಸ ಶಿಕ್ಷಣ ನೀತಿಯ ಎಲ್ಲ ಜನ ವಿರೋಧಿ ಅಂಶಗಳ ವಿರುದ್ಧ ಪ್ರಜಾಸತ್ತಾತ್ಮಕ ಚಳುವಳಿ ಗಟ್ಟಿಯಾಗಬೇಕು ಹಾಗೂ ಈ ನೀತಿಯನ್ನು ಹಿಮ್ಮೆಟ್ಟಿಸಬೇಕು.

ತುಮಕೂರು ಸಿದ್ಧಗಂಗಾ ಮಠ – ಆಡಳಿತಾಧಿಕಾರಿಯನ್ನು ನೇಮಿಸಲಿ

– ಕಾ॥ ಕೆ. ಆರ್. ನಾಯಕ್

ಆಧ್ಯಾತ್ಮಿಕ ಕೇಂದ್ರವೆಂದು ಲೇಬಲ್ ಹಚ್ಚಿಕೊಂಡು ಶಿಕ್ಷಣ ಸಂಸ್ಥೆಗಳನ್ನು ಲಾಭದಾಯಕ ಉದ್ದಿಮೆಗಳನ್ನಾಗಿ ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಗಳಿಸಿ ಈ ಮುಖಾಂತರ ಬಂಡವಾಳಗಾರರು,ಜಾತಿಗಳು, ಹಾಗು ಪಟ್ಟಭದ್ರ ಹಿತಾಸಕ್ತಿಗಳ ನೆರವಿನೊಂದಿಗೆ ಸರ್ಕಾರದಿಂದ ಸಾಧ್ಯವಿರುವ ಎಲ್ಲಾ ಸೌಲಭ್ಯಗಳನ್ನು ಗಿಟ್ಟಿಸಿ, ಸಾಳ್ಮ ನಿರ್ಮಿಸಿಕೊಂಡಿರುವ ಶ್ರೀ ಸಿದ್ಧಗಂಗಾ ಮಠದ ಕಾರ್ಯ ವೈಖರಿ ಇತ್ತೀಚಿನ ವರ್ಷಗಳಲ್ಲಿ ಬಯಲಾಗುತ್ತಿದೆ.

ಹಿರಿಯ – ಕಿರಿಯ ಸ್ವಾಮಿಗಳ ಹೆಸರಿನಲ್ಲಿ ನಡೆಯುತ್ತಿರುವ ಒಂದೇ ಕೋಮಿನ ಎರಡು ಶಾಖೆಗಳ ಕಿತ್ತಾಟದಲ್ಲಿ ನಮಗೆ ಆಸಕ್ತಿಯಿಲ್ಲ. ಆದರೆ ಈ ಕಿತ್ತಾಟದಲ್ಲಿ ಹಲವಾರು ಶಾಲಾ ಕಾಲೇಜುಗಳ ಹತ್ತಾರು ಸಾವಿರ ವಿದ್ಯಾರ್ಥಿಗಳ, ಸಾವಿರಾರು ಅಧ್ಯಾಪಕರ ಸ್ಥಿತಿ ಅನಿಶ್ಚಿತವಾಗುತ್ತಿದೆ. ವಿದ್ಯಾಭ್ಯಾಸ ಮಾಡುವ ಚಿಕ್ಕ ಹಾಗೂ ವಯಸ್ಕ ಮುಗ್ಧ ವಿದ್ಯಾರ್ಥಿಗಳಲ್ಲಿ ಅಸಹ್ಯ ಹುಟ್ಟಿಸುವ ಕೆಟ್ಟ ಭಾಷೆಯ ಬಯ್ಗಳ ವಿನಿಮಯವಾಗಿ ಜಾತಿ ಒಳಜಾತಿಗಳ ವೈಷಮ್ಯವನ್ನು ಅಧ್ಯಾಪಕರುಗಳೇ ಹೇಳಿಕೊಟ್ಟು ಘರ್ಷಣೆಗೆ ಇಳಿಸುವ ಹೀನ ಪರಿಸ್ಥಿತಿ ಈ ಶಾಲಾ ಕಾಲೇಜುಗಳಲ್ಲಿ ದಳ್ಳುರಿಯಂತೆ ಹಬ್ಬುತ್ತಿದೆ.

ವರ್ಷಗಟ್ಟಲೆ ಈ ಅಸಹ್ಯಕರ ಬೆಳವಣಿಗೆಯನ್ನು ಮೂಕ ಪ್ರೇಕ್ಷಕನಂತೆ ವೀಕ್ಷಿಸುತ್ತಾ, ತಾತ್ಕಾಲಿಕವಾಗಿ ತೇಪೆ ಕೆಲಸ ಮಾಡುವುದು ಸರ್ಕಾರದ ಕೆಲಸವಲ್ಲ. ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ತನ್ನ ಘೋಷಿತ ನೀತಿಗೆ ವಿರುದ್ಧವಾಗಿ ನಡೆಯುತ್ತಿರುವ ಸರಕಾರದ ನಿಲುವಿನ ಬಗ್ಗೆ ಪ್ರತಿಯೊಬ್ಬರೂ ಗಂಭೀರವಾಗಿ ಯೋಚಿಸಬೇಕಾಗಿದೆ. ಈ ಸಂಸ್ಥೆಯ ಹೆಸರಿನಲ್ಲಿ ನಡೆಯುತ್ತಿರುವ ಶಾಲಾ ಕಾಲೇಜುಗಳು ಮಠದ ಇಬ್ಬರು ಸ್ವಾಮಿಗಳ ಹಾಗೂ ಅವರ ಗುಂಪುಗಳ ಸ್ವತ್ತಲ್ಲ. ಸಾರ್ವಜನಿಕ ಹಾಗೂ ಸರ್ಕಾರದ ಸಹಾಯ, ಸಹಕಾರಗಳಿಂದ ಇವು ಬೆಳೆದಿವೆ ಎಂಬುದನ್ನು ಮರೆಯಬಾರದು. ಆದ್ದರಿಂದಲೇ ಕೂಡಲೇ ಸರಕಾರವು ವಿದ್ಯಾಸಂಸ್ಥೆಗಳನ್ನು ವಶಪಡಿಸಿಕೊಂಡು ಆಡಳಿತಾಧಿಕಾರಿಯನ್ನು ನೇಮಿಸಲಿ. ಧಾರ್ಮಿಕ ಕಾರ್ಯಗಳು ಅವರದೇ ಆದ ರೀತಿಯಲ್ಲಿ ನಡೆಯಲಿ. ಇದಕ್ಕೂ ನಮಗೂ ಯಾವ ಸಂಬಂಧವೂ ಇಲ್ಲ. ವಿದ್ಯಾರ್ಥಿ ಅಧ್ಯಾಪಕ ಮತ್ತಿತರ ನೌಕರರು ಹಾಗೂ ಸಾರ್ವಜನಿಕರಲ್ಲಿ ಉಂಟಾಗಿರುವ ಅನಿಶ್ಚಿತತೆಯನ್ನು ಬಗೆಹರಿಸಿ ಕಾನೂನು ಮೂಲಕ ಕಿಡಿಗೇಡಿಗಳ ಮೇಲೆ ಕ್ರಮ ತೆಗೆದುಕೊಂಡು ಶ್ರೀ ಸಿದ್ಧಗಂಗಾ ಮಠ ಹಾಗೂ ಅದರ ಸುತ್ತಲಮುತ್ತಲ ಪ್ರದೇಶದಲ್ಲಿ ಭಯದ ವಾತಾವರಣವನ್ನು ಕೊನೆಗಾಣಿಸಬೇಕೆಂದು ಕರ್ನಾಟಕ ರಾಜ್ಯ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಕೆ. ಆರ್. ನಾಯಕ್‌ರವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಎಸ್. ಎಫ್. ಐ. ರಾಜ್ಯ ಸಮಿತಿ ವಿಸ್ತೃತ ಸಭೆ

ಸೆಪ್ಟಂಬರ್ 20 ಮತ್ತು 21 ರಂದು ಬೆಂಗಳೂರಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಸಮಿತಿಯ ವಿಸ್ತೃತ ಸಭೆಯು ಆರ್. ಜಯಕುಮಾರ್‌ರವರ ಅಧ್ಯಕ್ಷತೆಯಲ್ಲಿ ಜರುಗಿ ಹಿಂದಿನ ತೀರ್ಮಾನಗಳ ಜಾರಿಯ ಕುರಿತು ವಿಮರ್ಶಿಸಿದೆ. ದಸರಾ ರಜೆಯಲ್ಲಿ ಮನೆಮನೆಗೆ ತೆರಳಿ ಸದಸ್ಯತ್ವ ನೋಂದಾಣಿಕೆ ಮತ್ತು ನಿಧಿ ಸಂಗ್ರಹಿಸಲು ನಿರ್ಧರಿಸಲಾಗಿದೆ.

ಅಕ್ಟೋಬರ್-ನವಂಬರ್ ತಿಂಗಳುಗಳಲ್ಲಿ ಜಿಲ್ಲಾ ಸಮ್ಮೇಳನಗಳನ್ನು ಮುಗಿಸಿ ಡಿಸೆಂಬರ್ ತಿಂಗಳಲ್ಲಿ ರಾಜ್ಯ ಸಮ್ಮೇಳನ ಅಥವಾ ರಾಜ್ಯ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ. ಡಿಸೆಂಬರ್ ಅಂತ್ಯದ ವೇಳೆಗೆ ಆಂಧ್ರ ಪ್ರದೇಶದಲ್ಲಿ 6ನೇ ರಾಷ್ಟ್ರ ಸಮ್ಮೇಳನವು ಜರುಗಲಿದೆ.

ಸೆಪ್ಟಂಬರ್ 17 ರಂದು ಎಸ್. ಎಫ್.ಐ. ಮತ್ತು ಡಿ.ವೈ.ಎಫ್.ಐ. ಘಟಕಗಳು ರಾಜ್ಯದಾದ್ಯಂತ "ಸರ್ವರಿಗೂ ಶಿಕ್ಷಣ" ಸರ್ವರಿಗೂ ಉದ್ಯೋಗ ದಿನಾಚರಣೆಯ ಅಂಗವಾಗಿ 10 ಅಂಶಗಳ ಬೇಡಿಕೆ ಒತ್ತಾಯಿಸಿ ಸರ್ಕಾರಿ ಕಛೇರಿಗಳ ಮುಂದೆ ಮತ ಪ್ರದರ್ಶನ, ಧರಣಿ ಮುಷ್ಕರ ನಡೆಸಿರುವ ವರದಿ ಬಂದಿದ್ದು ಸಮಾನ ಧೋರಣೆಯ ಸಂಘಟನೆಗಳೊಂದಿಗೆ ಐಕ್ಯ ಹೋರಾಟದ ಪ್ರಯತ್ನವನ್ನು ಮುಂದುವರಿಸಲು ನಿರ್ಧರಿಸಲಾಗಿದೆ. ಪಠ್ಯ ಪುಸ್ತಕಗಳ ಶೀಘ್ರ ಸರಬರಾಜು ಮತ್ತು ಕೊರತೆಯನ್ನು ನಿವಾರಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ನಿರ್ಣಯವೊಂದನ್ನು ಅಂಗೀಕರಿಸಲಾಗಿದೆ.

ಪತ್ರಿಕಾ ಗೋಷ್ಠಿ

ಎಸ್. ಎಫ್. ಐ. ಅಖಿಲ ಭಾರತ ಪ್ರಧಾನಕಾರ್ಯದರ್ಶಿ ಹಾಗೂ ರಾಜ್ಯ ಸಭಾ ಸದಸ್ಯರಾದ ಕಾ॥ ನೇಪಾಲ್ ದೇವ್ ಭಟ್ಟಾಚಾರ್ಯರವರು ಸಭೆಯಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು. ಮರುದಿನ ನಡೆದ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡುತ್ತಾ, ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ನಿರ್ದಾಕ್ಷಣ್ಯವಾಗಿ ಹೋರಾಡುವ ಬದಲು ಪ್ರಧಾನ ಮಂತ್ರಿ ರಾಜೀವ್‌ಗಾಂಧಿಯವರು ರಾಜಿ ಮನೋಭಾವ ಹೊಂದಿದ್ದಾರೆಂದು ಅವರು ಟೀಕಿಸಿದರು. ಇತ್ತೀಚೆಗೆ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗೂರ್ಖಾಲ್ಯಾಂಡ್ ಚಳುವಳಿಯು ರಾಷ್ಟ್ರವಿರೋಧಿಯಲ್ಲವೆಂದು ಪ್ರತಿಕ್ರಿಯೆ ವ್ಯಕ್ತಪಡಿಸಿರುವುದನ್ನು ತೀವ್ರವಾಗಿ ಖಂಡಿಸಿ ಇಮ ಪ್ರಧಾನ ಮಂತ್ರಿಯವರ ಬಾಲಿಶತನದ ಪರಮಾವಧಿಯಾಗಿದೆಯೆಂದು ನುಡಿದರು.

ಕೇಂದ್ರ ಸರ್ಕಾರದ ಅವಾಸ್ತವಿಕ ನೂತನ ಶಿಕ್ಷಣ ನೀತಿಯನ್ನು ವಿರೋಧಿಸಿದ ಅವರು ನವೋದಯ ಶಾಲೆಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷಾ ಮಾಧ್ಯಮವನ್ನು ಅನುಸರಿಸುವ ಮೂಲಕ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕನ್ನು ನಿರಾಕರಿಸಲಾಗಿದೆಯೆಂದು ಭಟ್ಟಾಚಾರ್ಯ ಟೀಕಿಸಿದರು.

ಕರ್ನಾಟಕದಲ್ಲಿ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ಮತ್ತು ಮುಕ್ತ ವಿಶ್ವವಿದ್ಯಾಲಯ ತೆರೆಯುವ ಬಗ್ಗೆ ಒಲವು ತೋರುತ್ತಿರುವುದನ್ನು ರಾಜ್ಯ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಟೀಕಿಸಿ ರಾಜ್ಯ ಸರ್ಕಾರವು ನೂತನ ಶಿಕ್ಷಣ ನೀತಿಯ ವಿರುದ್ಧ ಬಿಗಿ ನಿಲುವು ತಳೆಯಬೇಕೆಂದು ಒತ್ತಾಯಿಸಿದರು. ಡೊನೇಷನ್ ಶುಲ್ಕ ಪದ್ಧತಿಯ ಪಿಡುಗನ್ನು ಕೊನೆಗಾಣಿಸುವಲ್ಲಿ ಜನತಾ ಸರ್ಕಾರವು ಹಿಂದೆ ಬಿದ್ದಿದ್ದು ಕ್ಯಾಪಿಟೇಷನ್ ಆಧಾರಿತ ನೂತನ ಖಾಸಗಿ ವೈದ್ಯಕೀಯ ಮತ್ತು ಇಂಜನೀಯರಿಂಗ್ ಕಾಲೇಜುಗಳಿಗೆ ಪರವಾನಗಿ ನೀಡಿರುವುದನ್ನು ಟೀಕಿಸಿದರು.

ಕರ್ನಾಟಕ ಶಿಕ್ಷಣ ಮಸೂದೆಗೆ ರಾಷ್ಟ್ರಪತಿಯವರು ಶೀಘ್ರ ಅಂಕಿತ ನೀಡುವಂತೆ ರಾಜ್ಯದ ಅಭಿವೃದ್ಧಿ ಯೋಜನೆಗಳ ಜಾರಿಮಾಡುವಂತೆ ಹಾಗೂ ನಿರುದ್ಯೋಗ ಭತ್ಯೆ ಯೋಜನೆ ಪ್ರಾರಂಭಿಸುವಂತೆ ಸಹ ಒತ್ತಾಯಿಸಲಾಗಿದೆ.

ವೆಂಕಟಸ್ವಾಮಿ ಆಯೋಗದ ವರದಿಗೆ ಸಂಬಂಧಿಸಿದ ಚಳುವಳಿಯ ಬಗ್ಗೆ ಪ್ರಸ್ತಾಪಿಸುತ್ತಾ ಕಾ॥ ನೇಪಾಲ್ ದೇವ್ ಭಟ್ಟಾಚಾರ್ಯರವರು ರಾಜ್ಯ ಸರ್ಕಾರವು ವರದಿಯನ್ನು ಪುನರ್ ಪರಿಶೀಲಿಸುವಂತೆ ಒತ್ತಾಯಿಸಿದರು. ಹಾವನೂರು ಆಯೋಗದ ಹಿನ್ನಲೆಯಲ್ಲಿ ಸುಪ್ರೀಂಕೋರ್ಟ್ ನೀಡಿರುವ ಆದೇಶಗಳನ್ನು ಪರಿಗಣಿಸಿ ಹಿಂದುಳಿದ ವರ್ಗಗಳ ಮೀಸಲಾತಿಯ ಕುರಿತು ವೈಜ್ಞಾನಿಕ ನಿಲುವು ತಳೆಯಬೇಕಾಗಿದೆಯೆಂದು ಅವರು ಸೂಚಿಸಿದರು. ಸರ್ಕಾರವು ವರದಿಯನ್ನು ಇನ್ನೂ ಅಂಗೀಕರಿಸಿಲ್ಲವಾದ್ದರಿಂದ ಸಂಧಾನದ ಮೂಲಕ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಬೇಕೆಂದು ಹಾಗೂ ವಿದ್ಯಾರ್ಥಿಗಳು ಅನವಶ್ಯಕವಾಗಿ ಶೈಕ್ಷಣಿಕ ಅವಧಿಯನ್ನು ವ್ಯರ್ಥಮಾಡಬಾರದೆಂದು ಸಲಹೆ ನೀಡಿದರು ○

ಕರ್ನಾಟಕದ ಎರಡನೇ ಹಿಂದುಳಿದ ವರ್ಗಗಳ ಆಯೋಗದ ಕುರಿತು ಸಿ ಪಿ ಐ (ಎಂ) ರಾಜ್ಯ ಸಮಿತಿಯ ನಿಲುಮೆ

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು ಜಮೀನುದಾರರ – ಬಂಡವಾಳದಾರರ ವರ್ಗಗಳ ಕೇಂದ್ರ ಸರ್ಕಾರ ಬಂಡವಾಳಶಾಹಿ ಪಥದಲ್ಲಿ ದೇಶವನ್ನು ಕೊಂಡೊಯ್ಯಬೇಕೆಂದು ಕೆಲಸ ಮಾಡುತ್ತಿದ್ದು ಜಮೀನ್‌ದಾರಿ ಪದ್ಧತಿ ಮತ್ತು ಪಾಳೆಯಗಾರಿ ಅವಶೇಷಗಳು ಸಂಪೂರ್ಣವಾಗಿ ಹೋಗದೆ ಹಳ್ಳಿಯ ಬಡವರು ನಿರ್ಗತಿಕರಾಗಿ ಸಾಮಾಜಿಕ ತುಳಿತಕ್ಕೆ, ಆರ್ಥಿಕ ಶೋಷಣೆಗೆ ಒಳಗಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮೀಸಲಾತಿಯೇ ಅವರ ಸಮಸ್ಯೆಗಳಿಗೆ ಮೂಲ ಪರಿಹಾರವಲ್ಲ. ಆದರೂ ಉದ್ಯೋಗದ ಅವಕಾಶಗಳು ಕಡಿಮೆಯಾಗುತ್ತಿರುವಾಗ ಉಚ್ಚ ಶಿಕ್ಷಣದ ಪ್ರವೇಶದ ಅವಕಾಶ ಕಷ್ಟಕರವಾಗುತ್ತಿರುವಾಗ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಜನವಿಭಾಗದಲ್ಲಿ ಮೀಸಲಾತಿ ಒಂದು ತರದ ರಕ್ಷಣೆಯ ಅವಕಾಶ ಕೊಡುತ್ತದೆ. ಅದು ಬೇಕು ಎಂಬ ಅಭಿಪ್ರಾಯ ಹೊಂದುವುದು, ಅದಕ್ಕೆ ಪ್ರಯತ್ನ ಮಾಡುವುದು ಸಹಜ ಮತ್ತು ಸ್ವಾಭಾವಿಕ. ಆದ್ದರಿಂದಲೇ, ಈ ಮೀಸಲಾತಿ ಪ್ರಶ್ನೆ ಒಂದು ಪ್ರಮುಖ ಪ್ರಶ್ನೆಯಾಗಿ ಬಂದಿದೆ. ಈ ಬಗ್ಗೆ ಕೆಲವು ರಾಜ್ಯಗಳಲ್ಲಿ ಆಂದೋಲನಗಳು –ಜಾತಿ, ಜಾತಿ ಜಗಳಗಳು ನಡೆದಿವೆ. ಈ ಮೀಸಲಾತಿಯ ಬಗ್ಗೆ ಸುಪ್ರೀಂ ಕೋರ್ಟ್ ಅನೇಕ ವೇಳೆ ಚರ್ಚೆಮಾಡಿ ಅಭಿಪ್ರಾಯಗಳನ್ನು ಕೊಟ್ಟಿದೆ. ಹಾವನೂರ್ ಕಮೀಷನ್ ವರದಿ ಸಹ ಸುಪ್ರೀಂಕೋರ್ಟಿಗೆ ಹೋಗಿತ್ತು. ರಾಜ್ಯ ಸರ್ಕಾರ ಬೇಗನೇ ಒಂದು ಆಯೋಗವನ್ನು ನೇಮಿಸುವುದಾಗಿಯೂ ಮೀಸಲಾತಿಯನ್ನು ನಿರ್ಧರಿಸಲು ನಿರ್ದೇಶನ ನೀಡಬೇಕೆಂದು ಸುಪ್ರೀಂಕೋರ್ಟಿಗೆ ಕೇಳಿತ್ತು.

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಹಿಂದುಳಿದ ಜಾತಿಗಳ–ಸಮುದಾಯಗಳನ್ನು ಗುರ್ತಿಸುವುದಕ್ಕೆ ವೈಜ್ಞಾನಿಕವಾಗಿ ವಾಸ್ತವಿಕ ಅಂಶಗಳನ್ನು ಅಭ್ಯಸಿಸಿ ಜಾತಿ ಮತ್ತು ಬಡತನ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಅಭಿಪ್ರಾಯ ಪಡುತ್ತದೆ. ಉಚ್ಚ ನ್ಯಾಯಾಲಯ ಭಾರತ ಸಂವಿಧಾನದ 15(4) ಮತ್ತು 16 (4) ಕಲಮುಗಳ ಪ್ರಕಾರ ರಿಯಾಯಿತಿ–ಮೀಸಲಾತಿ ಸೌಲಭ್ಯವನ್ನು ಪಡೆಯಲು ಜಾತಿಯನ್ನೇ ಆಧಾರವಾಗಿ ಹಿಡಿಯುವುದು ಸರಿಯಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ. ಇದನ್ನು ಮಾರ್ಚ್ 1985ರಲ್ಲಿ ಕೊಟ್ಟ ತೀರ್ಪುಗಳಲ್ಲಿ ಉಲ್ಲೇಖಿಸಿದೆ.

"ಒಂದು ಜಾತಿಯ ಹಿಂದುಳಿಯುವಿಕೆಯನ್ನು ಗುರುತಿಸುವುದಕ್ಕೆ ಜಾತಿಯು ಅಗತ್ಯ" ಆದರೆ ಈ ಕೋರ್ಟಿನ ತೀರ್ಪಿನಲ್ಲಿ ಜಾತಿಯ ಹೊರತಾಗಿ ನಾಗರಿಕರ ಒಂದು ಗುಂಪಿನ ಸಾಮಾಜಿಕ ಹಿಂದುಳಿಯುವಿಕೆಯನ್ನು ಸಂಬಂಧಪಟ್ಟ ಅಧಿಕಾರವುಳ್ಳ ಸಂಸ್ಥೆ ನಿರ್ಧರಿಸುವುದನ್ನು ತಡೆಯುವುದಿಲ್ಲ. ನಾಗರಿಕರ ವರ್ಗದ ಹಿಂದುಳಿಯುವಿಕೆಯನ್ನು ತಿಳಿಯುವುದಕ್ಕೆ ಜಾತಿಯನ್ನು ಕೋರ್ಟ್ ಹೊರತುಪಡಿಸಲಿಲ್ಲವಾದಾಗ್ಯೂ, ವರ್ಗದ ಹಿಂದುಳಿಯುವಿಕೆಯನ್ನು ತಿಳಿಯಲು ಜಾತಿಯನ್ನು ಅನಿವಾರ್ಯವಾಗಿ ಆಧಾರವಾಗಿಟ್ಟುಕೊಳ್ಳಲು ನಿರ್ಧರಿಸಲಾಗಿದೆ. ಎಂದು ಕೋರ್ಟ್ ಅಭಿಪ್ರಾಯಪಡುವುದಿಲ್ಲ............

ವರ್ಗೀಕರಣವು ಕೇವಲ ಜಾತಿಯ ಆಧಾರದ ಮೇಲೆನೇ ನಡೆದರೆ, ಅದು ತರ್ಕಬದ್ಧವಾಗುವುದಿಲ್ಲ, ಬಹಳಷ್ಟು ಮಟ್ಟಿಗೆ ಸಾಮಾಜಿಕ ಹಿಂದುಳಿಯುವಿಕೆಯು ಬಡತನದ ಫಲವಾಗಿದೆ. ಹಿಂದುಳಿಯುವಿಕೆಯನ್ನು ತಿಳಿಯಲು ಜಾತಿ ಮತ್ತು ಬಡತನ ಅವಶ್ಯಕವಾಗಿದೆ; ಜಾತಿ ಮಾತ್ರವೇ ಆಗಲಿ, ಬಡತನ ಮಾತ್ರವೇ ಆಗಲಿ, ನಿರ್ಧಾರಕ ಪರೀಕ್ಷೆ ಆಗಲಾರದು.

ಸರ್ವೋಚ್ಚ ನ್ಯಾಯಾಲಯದ ತೀರ್ಪು

ಕರ್ನಾಟಕ ಎರಡನೇ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಶ್ರೀ ಟಿ. ವೆಂಕಟಸ್ವಾಮಿಯವರು ತಮ್ಮ ವರದಿಯನ್ನು ಮಾರ್ಚ್ 1986 ರ ಅಂತ್ಯದಲ್ಲಿ ಪೂರ್ತಿಗೊಳಿಸಿದರು. ಆ ಆಯೋಗ ಮಾರ್ಚ್ 1983 ರಲ್ಲಿ ಕರ್ನಾಟಕ ಸರ್ಕಾರದಿಂದ ರಚಿಸಲ್ಪಟ್ಟಿತ್ತು. ಕರ್ನಾಟಕ ಮಂತ್ರಿಮಂಡಳವು ಈ ವರದಿಯನ್ನು ಆಳವಾಗಿ ಅಭ್ಯಸಿಸಿ, ಆಲೋಚನೆ ಮಾಡಿ ದೇಶದ, ಮತ್ತು ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದು ಕೊಂಡು, ಅವಶ್ಯ ಕಂಡ ತಿದ್ದುಪಡಿಗಳನ್ನು ಸೂಚಿಸುವ ಮೂಲಕ ಅದನ್ನು ಬೆಳಕಿಗೆ ತರಬೇಕಿತ್ತು ಮತ್ತು ಜಾರಿಗೆ ತರಬೇಕಿತ್ತು. ಆದರೆ ಅದರ ಬದಲು ಆ ವರದಿಯನ್ನು ಕರ್ನಾಟಕ ವಿಧಾನ ಸಭೆ ಮತ್ತು ಪರಿಷತ್ತುಗಳಲ್ಲಿ ಕೊನೆ ದಿವಸ 'ಏಕಾಏಕಿಯಾಗಿ ಮಂಡಿಸಿರುವುದು ಮತ್ತು ಅದರ ಕುರಿತು ತನ್ನ ಅಭಿಪ್ರಾಯಗಳನ್ನು ಏನೂ ಹೇಳದೆ ಇದ್ದದು ಈ ದಿನ ಕರ್ನಾಟಕದಲ್ಲಿ ತುಂಬಾ ಗೊಂದಲಕ್ಕೆ ಎಡೆಮಾಡಿದೆ. ಈ ಸರಕಾರವನ್ನು ವಿರೋಧಿಸುವ ಕೆಲವು ಶಕ್ತಿಗಳು–ವ್ಯಕ್ತಿಗಳು ಇದನ್ನು ಉಪಯೋಗಿಸಿಕೊಂಡು ಕೆಲವು ಪ್ರದೇಶದಲ್ಲಿ ತೀವ್ರ ಚಳುವಳಿಗೇನೆ ಇಳಿದಿದ್ದಾರೆ. ಈ ವರದಿಯಲ್ಲಿ 'ಏನಿದೆ, ಅದರ ಶಿಫಾರಸುಗಳು ಏನು' ಅದು ಹಾವನೂರು ವರದಿಗಿಂತ ಯಾವ ರೀತಿಯಲ್ಲಿ ಭಿನ್ನವಾಗಿದೆ, ಅದರ ಸೂಚನೆಗಳು ' ಏನು? ಆ ಸೂಚನೆಗಳು ಆಧಾರ ರಹಿತವೋ ಅಥವಾ ಆಧಾರ ಬರಿತವೋ ರಾಜ್ಯದಲ್ಲಿ ಆ ಸೂಚನೆಗಳನ್ನು ಜಾರಿಗೆ ತಂದರೆ 1) ಜಾತಿ ಕೋಮು ಪರಿಸ್ಥಿತಿ ಹೆಚ್ಚು ಬಿಗಡಾಯಿಸಬಹುದೋ ಮತ್ತು 2) ನಿಜವಾಗಿ ಹಿಂದುಳಿದ ಜಾತಿ ಸಮುದಾಯಗಳ ಮುನ್ನಡೆಗೆ ಸಹಾಯಕವಾಗಬಹುದೋ ಎಂಬುದನ್ನು ಜನತೆ ಮತ್ತು ಜನತೆಯ ವಿವಿಧ ವಿಭಾಗಗಳು ಭಾವನಾ ರಹಿತ ವಾತಾವರಣದಲ್ಲಿ ಚರ್ಚಿಸಿ ಒಮ್ಮತ ಅಭಿಪ್ರಾಯಕ್ಕೆ ಬರಲು ಈಗ ಸಾಧ್ಯವೇ ಇಲ್ಲದಂತಾಗಿದೆ. ಇದು ವಿಷಾದನೀಯ. ಭಾರತ ದೇಶವನ್ನು ಛಿದ್ರಮಾಡಬೇಕೆಂದು ಶ್ರಮಿಸುತ್ತಿರುವ ಸಾಮ್ರಾಜ್ಯವಾದಿ ಶಕ್ತಿಗಳಿಗೆ ಈ ಆಂದೋಲನಗಳು ಸಹಾಯ ಮಾಡುತ್ತವೆ. ಭಾರತದ ಸಮಗ್ರತೆ, ಐಕ್ಯತೆಗಳನ್ನು ಕಾಪಾಡುವ ದೃಷ್ಟಿಯಲ್ಲಿ ಮೀಸಲಾತಿ ವಿಷಯದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಒಮ್ಮತ ಅಭಿಪ್ರಾಯಕ್ಕೆ ಸಂಬಂಧಪಟ್ಟ ಎಲ್ಲರೂ ಶ್ರಮಿಸಬೇಕೆಂದು ನಮ್ಮ ಪಕ್ಷ ಅಪೇಕ್ಷಿಸುತ್ತದೆ.

ಇನ್ನು ಈ ವರದಿಯ ಕುರಿತು ನಮ್ಮ ವಿಶ್ಲೇಷಣೆ ಹೀಗಿದೆ :

(1) ಹಿಂದುಳಿದ ವರ್ಗಗಳ ಎರಡನೇ ಆಯೋಗವು ಸುಪ್ರೀಂಕೋರ್ಟಿನಲ್ಲಿ ಹಾವನೂರು ವರದಿಯ ಕುರಿತು ಕರ್ನಾಟಕ ಸರ್ಕಾರದ ಆಜ್ಞೆ ತಾ॥ 22-2-77ರ ವಿಷಯದಲ್ಲಿ ರಿಟ್ ಪಿಟಿಷನ್‌ಗಳ ಹಿನ್ನೆಲೆಯಲ್ಲಿ ಮತ್ತು ಅದು ಸುಪ್ರೀಂ ಕೋರ್ಟಿನ ನಿರ್ದೇಶನ ಸೂತ್ರಗಳ ಆಧಾರದಲ್ಲಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಶೀಲಿಸುವುದು ಎಂಬ ಭರವಸೆಯಲ್ಲಿ ರಚಿಸಲ್ಪಟ್ಟಿದ್ದಾಗಿದೆ. ಆದರೆ ವಾಸ್ತವವಾಗಿ ಸುಪ್ರೀಂ ಕೋರ್ಟಿನ ತೀರ್ಪು ಮತ್ತು ನಿರ್ದೇಶನ ಸೂತ್ರಗಳು ಪ್ರಕಟವಾದುದು ಮೇ 1985ರಲ್ಲಿ. ವೆಂಕಟಸ್ವಾಮಿ ಆಯೋಗವು ರಚಿಸಲ್ಪಟ್ಟಿದ್ದು ಮಾರ್ಚಿ 1983ರಲ್ಲಿ. ಅಂದರೆ, ವೆಂಕಟಸ್ವಾಮಿ ವರದಿಯಲ್ಲಿಯೇ ಹೇಳಿದಂತೆ "ಸುಪ್ರೀಂ ಕೋರ್ಟು ತೀರ್ಪು ಮತ್ತು ನಿರ್ದೇಶನಗಳು ಮೇ 1985ರಲ್ಲಿ ಹೊರಬಿದ್ದಾಗ ಆಯೋಗದ ಕೆಲಸ ಕಾರ್ಯಗಳು ಹೆಚ್ಚು ಕಡಿಮೆ ಕೊನೆಯ ಅಂದರೆ ವರದಿ ಬರೆಯುವ ಹಂತಕ್ಕೆ ಮುಟ್ಟಿತ್ತು.... ಇದರಿಂದಾಗಿ ಈ ವರದಿಯು ಸುಪ್ರೀಂ ಕೋರ್ಟಿನ ತೀರ್ಪು ಮತ್ತು ನಿರ್ದೇಶನ ಸೂತ್ರಗಳಿಗನುಸಾರವಾಗಿ ಕೆಲಸ ಕಾರ್ಯ ಮಾಡಿ ವೈಜ್ಞಾನಿಕ ಮತ್ತು ವಾಸ್ತವಿಕವಾದ ಸಂಗತಿಗಳ ಆಧಾರದಲ್ಲಿ ಹಾವನೂರು ವರದಿಯ ಪಟ್ಟಿಯನ್ನು ಪರಿಶೀಲಿಸಿ ಶಿಫಾರಸು ಮಾಡಿದೆಯೋ ಅಥವಾ ತನ್ನ ಸದಸ್ಯರ ಪೂರ್ವಕಲ್ಪಿತ ಅಭಿಪ್ರಾಯಕ್ಕನುಸಾರವಾಗಿ ವರ್ತಿಸಿದೆಯೋ ಎಂಬುದರ ಕುರಿತು ಒಮ್ಮತದ ಅಭಿಪ್ರಾಯಕ್ಕೆ ಬಾರದಿರುವುದರಿಂದ ವರದಿಯ ಬಗ್ಗೆಯೇ ಸಂಶಯವನ್ನುಂಟು ಮಾಡಲು ಆಸ್ಪದ ಕೊಟ್ಟಿದೆ. ಹೀಗಾಗಬಾರದಿತ್ತು.

ನಮ್ಮ ಅಭಿಪ್ರಾಯದಲ್ಲಿ, ವೆಂಕಟಸ್ವಾಮಿ ವರದಿ "ಜಾತಿ ಮತ್ತು ಬಡತನ" ಎಂಬ ಪರೀಕ್ಷೆಯ ಆಧಾರವನ್ನು ಸಾಕಷ್ಟು ಗಂಭೀರವಾಗಿಟ್ಟು ಆ ದೃಷ್ಟಿಯಲ್ಲಿ ಪರಿಶೀಲನೆ ನಡೆಸಲಿಲ್ಲ. ಬದಲು ಜಾತಿಗೆ ಅಧಿಕೃತ ಒತ್ತು ಕೊಟ್ಟಿದೆ ಎಂದು ಕಾಣುತ್ತದೆ. ಈ ತಪ್ಪು ಸ್ವಲ್ಪ ಮಟ್ಟಿಗೆ ಹಾವನೂರು ಆಯೋಗವು ಮಾಡಿದೆ.

ಆಯೋಗವು ರೂ. 50 ಲಕ್ಷ ಖರ್ಚು ಮಾಡಿ ರಾಜ್ಯದ ವಿವಿಧ ವಿಭಾಗಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ಅಭ್ಯಾಸ ಮಾಡಿದೆ. ಸಾಕಷ್ಟು ಅಂಕೆ ಅಂಶಗಳನ್ನು ಸಂಗ್ರಹ ಮಾಡಿದೆ.

ಆದರೆ ವರದಿಯ ಶಿಫಾರಸುಗಳನ್ನು ನೋಡುವಾಗ "ಈ ಎಲ್ಲಾ ಅಂಕೆ ಸಂಖ್ಯೆಗಳ ಆದರಲ್ಲೂ ಭೂಮಿ, ಮನೆ, ಕೆಲಸ, ಸಾಕ್ಷರತೆ, ವಿದ್ಯಾಭ್ಯಾಸಗಳ ಉಪಯೋಗವನ್ನು ಆಯೋಗವು ಸರಿಯಾಗಿ ಮಾಡಲಿಲ್ಲ" ಎಂದು ಕಾಣುತ್ತದೆ. ನಮ್ಮ ಅಭಿಪ್ರಾಯದಲ್ಲಿ "ಅಯೋಗಕ್ಕೆ ಸಾಮಾಜಿಕ ಹಿಂದುಳಿಯುವಿಕೆಯನ್ನು ಕಂಡು ಹಿಡಿಯುವುದರಲ್ಲಿ ಪಾಳೆಯಗಾರಿ ಸಮಾಜದ ಬುಡಕಟ್ಟನಿಂದ ಹೊರ ಬರುವುದರಲ್ಲಿ ಭೂಮಿ, ಮನೆ, ಕೆಲಸ, ಸಾಕ್ಷರತೆ, ವಿದ್ಯಾಭ್ಯಾಸ....ಪ್ರಮುಖ ಪಾತ್ರ ವಹಿಸುವುದು ಎಂದು ಚಾರಿತ್ರಿಕ ಭೌತಿಕವಾದ ದೃಷ್ಟಿ ಇರಲಿಲ್ಲ" ವೆಂದು ನಮ್ಮ ಅಭಿಪ್ರಾಯ.

ಹಿಂದುಳಿದ ಜಾತಿ–ಸಮುದಾಯಗಳಿಗೆ "ಮೀಸಲಾತಿ" ಇರುವಾಗಲೇ ಜಾತಿ ಮತ ಭೇದವಿಲ್ಲದೆ ಕೇವಲ ಬಡತನದಲ್ಲಿರುವ ವಿಭಾಗಗಳಿಗೆ ಚಂದಂಶ ಮೀಸಲಾತಿ ಇರುವುದು ಸಾಮಾಜಿಕ ನ್ಯಾಯ ಸಾಮಾಜಿಕ ಸಮತೋಲನದ ದೃಷ್ಟಿಯಿಂದ ಅವಶ್ಯಕವೆಂದು ತಿಳಿದೆ ಹಿಂದಿನ ಅರಸು ಸರ್ಕಾರವು ಬಿ.ಎಸ್.ಜಿ. ಗ್ರೂಪನ್ನು ರಚಿಸಿ ಮೀಸಲಾತಿ ಇಟ್ಟುದಾಗಿತ್ತು. ಅದನ್ನು ಸುಪ್ರೀಂಕೋರ್ಟ್ ತಳ್ಳಿಹಾಕದಿದ್ದರೂ, ವೆಂಕಟಸ್ವಾಮಿ ಆಯೋಗ ಅದನ್ನು ಕೆಲವರು ದುರುಪಯೋಗ ಪಡಿಸಿಕೊಂಡಿದ್ದಾರೆಂದು ತಳ್ಳಿಹಾಕಿದುದು ಸರಿಯಲ್ಲ. ಬಿ.ಎಸ್.ಜಿ. ಗ್ರೂಪನ್ನು ಮುಂದುವರಿಸಬೇಕೆನ್ನುವುದು ನಮ್ಮ ಅಭಿಪ್ರಾಯ.

ನಮ್ಮ ಅಭಿಪ್ರಾಯದಲ್ಲಿ ಈ ತಕ್ಷಣವೇ ಮಾಡಬೇಕಾಗಿರುವುದು ಸುಪ್ರೀಂ ಕೋರ್ಟ್ ನಿರ್ದೇಶನದ ಆಧಾರದಲ್ಲಿ ವೆಂಕಟಸ್ವಾಮಿ ಆಯೋಗ ಸಂಗ್ರಹಿಸಿರುವ ಅಂಕಿ ಅಂಶಗಳನ್ನು ಪರಿಶೀಲಿಸಿ, ಯಾವ ಯಾವ ಜಾತಿಗಳನ್ನು ಸೇರಿಸಬಹುದು ಅಥವಾ ಬಿಡಬಹುದು ಎಂಬುದನ್ನು ಜಾತಿ ಮತ್ತು ಬಡತನದ ಆಧಾರದ ಮೇಲೆ ತೀರ್ಮಾನಿಸಿ ಬಿ.ಎಸ್.ಜಿ.ಯನ್ನು ಮುಂದುವರಿಸಿಕೊಂಡು ಹೋಗಲು ರಾಷ್ಟ್ರೀಯ ರಾಜಕೀಯ ಪಕ್ಷಗಳ ಅಧಿಕೃತ ವಕ್ತಾರರು ಹಾಗೂ ಸಮರ್ಥ ಸಮಾಜವಿಜ್ಞಾನಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ ಅದು ಮೂರು ತಿಂಗಳ ಒಳಗೆ ತಮ್ಮ ಒಮ್ಮತದ ವರದಿ ಸಲ್ಲಿಸುವಂತೆ ಸರ್ಕಾರ ಕ್ರಮ ವಹಿಸಬೇಕು.

ಈ ಸಮಿತಿ ತನ್ನ ಕೆಲಸ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡಲು ಒಳ್ಳೆಯ ವಾತಾವರಣವನ್ನು ಉಂಟುಮಾಡಬೇಕು. ಆದ್ದರಿಂದ ಈಗ ನಡೆಯುತ್ತಿರುವ ಚಳುವಳಿಯನ್ನು ತಕ್ಷಣ ನಿಲ್ಲಿಸಲು ಎಲ್ಲಾ ರಾಜಕೀಯ ಪಕ್ಷಗಳು, ಸಂಘ–ಸಂಸ್ಥೆಗಳು, ವ್ಯಕ್ತಿಗಳು ಶ್ರಮಿಸಬೇಕೆಂದು ನಮ್ಮ ಪಕ್ಷ ಕಳಕಳಿಯಿಂದ ಮನವಿ ಮಾಡುತ್ತದೆ.

ಹೊಸ ಇಪ್ಪತ್ತಂಶ –
ಹೊಸ ಪ್ಯಾಕೇಟಿನಲ್ಲಿ ಹಳೆಯ ಸರಕು

ರಾಜೀವ ಗಾಂಧಿ ಸ್ವಾತಂತ್ರ್ಯ ದಿನದ ಕೆಂಪು ಕೋಟೆಯ ಭಾಷಣದಲ್ಲಿ ಹೊಸ 20 ಅಂಶ ಕಾರ್ಯಕ್ರಮವನ್ನು ಘೋಷಿಸಿದರು. ಆಮೇಲೆ ಈ ಕಾರ್ಯಕ್ರಮವನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಯಿತು. ಇದು 20 ಅಂಶ ಕಾರ್ಯಕ್ರಮಗಳ ಮೂರನೆಯ ಅವತಾರ. ಇದು "ಮಾಡಬೇಕಾದ ಒಳ್ಳೆಯ ಕೆಲಸ"ಗಳನ್ನು ಮೂಟೆ ಕಟ್ಟಿ ಒಂದು ಕಡೆ ಎಸೆದಂತಿದೆ. ಈ ಕಾರ್ಯಕ್ರಮ ಸಹ 20 ಅಂಶ ಕಾರ್ಯಕ್ರಮಗಳ ಹಿಂದಿನ ಎರಡು ಅವತಾರಗಳಂತೆ.

"ನಿಮಗೆ ಗ್ರಾಮೀಣ ಬಡತನದ ಮೇಲೆ ಧಾಳಿ" ಬೇಕೆ? ಇಲ್ಲವೆ "ಸದಾ ಸೇವೆಯಲ್ಲಿರುವ ಆಡಳಿತ" ಅಥವಾ "ಎರಡು ಮಕ್ಕಳ ಪದ್ಧತಿ" ಅಥವಾ "ಪರಿಸರ ಸಂರಕ್ಷಣೆ" ಬೇಕೆ ? ಅಷ್ಟೇ ಯಾಕೆ "ಭೂ ಸುಧಾರಣೆಗಳು" ಮತ್ತು "ಪರಿಶಿಷ್ಟ ಜಾತಿ ಮತ್ತು ಆದಿವಾಸಿಗಳಿಗೆ ನ್ಯಾಯ" ಸಹ ಮರೆತಿಲ್ಲ. ಇವೆಲ್ಲಾ ಹೊಸ 20 – ಅಂಶ ಕಾರ್ಯಕ್ರಮದಲ್ಲಿ ದಂಡಿಯಾಗಿವೆ. ಆದರೆ ಇವೆಲ್ಲಾ ಬರಿಯ ಅಂಶಗಳಾಗಿ ಉಳಿದಿವೆ. ಇದರ ಹಿಂದೆ ಯಾವುದೇ ವಿಶ್ಲೇಷಣೆ, ಆಲೋಚನೆ ಅಥವಾ ಇಂತಹ ಹಳೆಯ ಕಾರ್ಯಕ್ರಮಗಳು ಯಾಕೆ ವಿಫಲವಾದವು ಎಂಬುದರ ಬಗ್ಗೆ ಕಾಳಜಿ ಇದ್ದಂತಿಲ್ಲ.

ನಮಗೆ ಒಂದೇ ಅರ್ಥವಾಗಿಲ್ಲ. ಈ ಅಂಶಗಳನ್ನು 20 ಕ್ಕೆ ಯಾಕೆ ರಾಜೀವ ಗಾಂಧಿಯವರು ನಿಲ್ಲಿಸಿದ್ದಾರೆ ಅಂತ. "ಪಟ್ಟಣಗಳನ್ನು ಸ್ವಚ್ಛಗೊಳಿಸುವುದು", "ವೃದ್ಧರ ಮತ್ತು ಕೈಲಾಗದವರ ಶುಶ್ರೂಷೆ", "ಅಲ್ಪ ಸಮಯದಲ್ಲಿ ನ್ಯಾಯ ಪರಿಹಾರ" ಸಾಲು ಮರಗಳನ್ನು ನೆಡಿಸುವುದು, ಹೆದ್ದಾರಿಗಳನ್ನು ಮಾಡಿಸುವುದು ಇತ್ಯಾದಿ ಇನ್ನೂ ಹಲವು ಅಂಶಗಳನ್ನು ಸೇರಿಸಿ ನೂರು – ಅಂಶ ಕಾರ್ಯಕ್ರಮ ಮಾಡಬಹುದಿತ್ತಲ್ಲ ! 20 ಅಂಶ ಕಾರ್ಯಕ್ರಮಗಳ ಅಪ್ಪ ಹಾಗೂ ತಾತ ನೆನಪು ಮಾಡಿಕೊಡಬೇಕೆಂಬುದನ್ನು ಬಿಟ್ಟರೆ ಬೇರೆ ಯಾವ ಕಾರಣ ಕಾಣುತ್ತಿಲ್ಲ ನಮಗೆ. ನಿಜವಾಗಿಯೂ ಈ "ಹೊಸ" ಕಾರ್ಯಕ್ರಮದ ಬಗ್ಗೆ ತಲೆ ಕೆಡಿಸಿಕೊಳ್ಳುವ ಯಾವ ಅಗತ್ಯವಿಲ್ಲ. ಆದರೆ ಈ ಕಾರ್ಯಕ್ರಮದ ಬಗ್ಗೆ ಟೀವಿ, ರೇಡಿಯೋ, ಪತ್ರಿಕೆಗಳು ಆಗಲೇ ಹೊಯ್ದುಕೊಳ್ಳುತ್ತಿರುವುದರಿಂದ ಇದರ ಬಗ್ಗೆ ಬರೆಯುವ ಅಗತ್ಯ ಬಂದಿದೆ.

ಈ ಕಾರ್ಯಕ್ರಮ ಹೊಸತೇನನ್ನೂ ತರದಿದ್ದರೂ ಕೆಲವು ಹಳೆಯ ಸತ್ಯಗಳನ್ನು ಆಳುವವರು ತಮಗೆ ಗೊತ್ತಿಲ್ಲದಂತೆಯೇ ಒಪ್ಪಿಕೊಂಡಿದ್ದಾರೆ. ಆರನೇಯ ಯೋಜನೆಯಲ್ಲಿ ಬಡತನ ರೇಖೆಯಿಂದ ಕೆಳಗಿರುವವರ ಸಂಖ್ಯೆ ಪ್ರತಿಶತ 48 ರಿಂದ 30 ಕ್ಕೆ ಇಳಿಯುವ ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಸರ್ಕಾರ ಪದೇ ಪದೇ ಆರನೆಯ ಯೋಜನೆಯ "ಸಫಲತೆ" ಯ ಬಗ್ಗೆ ಹೇಳುತ್ತಿರುವುದರಿಂದ ಇದು ಜಾರಿಯಾಗಿದೆ ಎಂದು ತಿಳಿಯಬಹುದಾದರೆ . ಏಳನೆಯ ಯೋಜನೆಯ ಅವಧಿಯಲ್ಲಿ ಬಡತನ ಶೇ 20ಕ್ಕೂ ಎಂಟನೆಯ ಅವಧಿಯಲ್ಲಿ ಶೇ. 10 ಕ್ಕೂ ಇಳಿಸೀತು.

ಇಷ್ಟೇ ಅಲ್ಲದೆ ಇತ್ತೀಚೆಗಷ್ಟೇ "ಗರೀಬಿ" ಪೂರ್ಣ "ಹಟಾವಾ"ಗುತ್ತಿದೆ ಎಂದು ಹೇಳಿದಂತಿದೆಯಲ್ಲ ! ನಮ್ಮ ಅರ್ಥಶಾಸ್ತ್ರಜ್ಞರಂತೂ ಶ್ರೀಮತಿ ಗಾಂಧಿ ಗದ್ದಿಗೆಗೆ ವಾಪಸ್ಸು ಬಂದ ಮೇಲೆ ಗರೀಬಿ ಹಟಾವಾಗುತ್ತಲೇ ಇದೆ ಎಂದು ಸಾಧಿಸಲು "ಓವರ್ ಟೈಂ" ಕೆಲಸ ಮಾಡುತ್ತಿದ್ದಾರೆ.

ಆದರೂ ಈ ಕಾಯಕ್ರಮದಲ್ಲಿ ಮೊದಲನೆಯ ಅಂಶ "ಬಡತನದ ಮೇಲೆದಾಳಿ" ಏನಿದರ ಅರ್ಥ. ಒಂದೋ ಗರೀಬಿ ಹಟಾವೋ ಮಾಡಿದ ಹಿಂದಿನ ಮಾತುಗಳೆಲ್ಲಾ ಬೊಗಳೆ ಎನ್ನಬೇಕು ಇಲ್ಲವೆ ಬಡತನ ನಿವಾರಣೆಯಾಗಿದೆ ಎನ್ನುವುದಾದರೆ ಈ ಅಂಶದ ಅಗತ್ಯವೇನು ? ಸರ್ಕಾರದ ಈಗಿನ ಹೇಳಿಕೆಯನ್ನೂ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕೆಂದರೆ ಹಿಂದೆ ಹೇಳಿಕೊಂಡು ಬಂದದ್ದೆಲ್ಲಾ ಬುರುಡೆ ಎಂದು ಸರ್ಕಾರನೇ ಒಪ್ಪಿಕೊಂಡಂತಾಗಿದೆ. ಇದು ಬುರುಡೆ ಎಂದು ಹೆಚ್ಚು ಕಡಿಮೆ ಎಲ್ಲರಿಗೂ ಗೊತ್ತಿದ್ದರೂ ಸರ್ಕಾರ ಹಾಗೆಂದು ಘಂಟಾಘೋಷವಾಗಿ ಸಂಭ್ರಮದಿಂದ ಸಾಗುವುದು ವಿಶೇಷವೇ ತಾನೆ !

ಯೋಜನೆಯ ಗೋಸುಂಬೆತನ

ಈ ಕಾರ್ಯಕ್ರಮದಿಂದ ನಮ್ಮ ದೇಶದಲ್ಲಿ ಪಂಚವಾರ್ಷಿಕಯೋಜನೆಗಳ ಟೊಳ್ಳುತನ ಸಹ ಹೊರಬಿದ್ದಿದೆ. ಕೆಲವು ತಿಂಗಳುಗಳ ಹಿಂದಷ್ಟೆ ಏಳನೇ ಯೋಜನೆ ಕೊನೆಯದಾಗಿ ತಯಾರಾಗಿದೆ. ಈ ಎಲ್ಲಾ 20 ಅಂಶಗಳು. ಈ ಯೋಜನೆಯಲ್ಲಿ ಕಾಣಸಿಗುತ್ತವೆ. ಈಗಾಗಲೇ ಎಲ್ಲರಿಗೂ ಗೊತ್ತಿರುವ ಏಳನೆ ಯೊಜನೆಯ ಅಂಶಗಳನ್ನೇ ಮತ್ತೆ ಹೇಳುವ ಈ ಕಾರ್ಯಕ್ರಮದಲ್ಲಿ ಹೊಸತನ ಏನು ? ಎಂಬುದು ಸ್ವಾಭಾವಿಕ ಪ್ರಶ್ನೆ.

ಏಳನೇಯ ಯೋಜನೆಯಲ್ಲಿ ಇರುವ ಈ ಅಂಶಗಳಿಗೆ ಒದಗಿಸಿದ ಹಣವನ್ನು ಹೆಚ್ಚು ಮಾಡುವ ಯೋಜನೆ ಸರ್ಕಾರಕ್ಕಿಲ್ಲದಿದ್ದರೆ ಈ ಕಾರ್ಯಕ್ರಮಕ್ಕೆ ಏನೂ ಅರ್ಥವಿಲ್ಲ. ಆದರೆ ಈ ಅಂಶಗಳಿಗೆ ಹೆಚ್ಚು ಹಣ ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶವಾದರೆ ಏಳನೇಯ ಯೋಜನೆಯನ್ನು ಕೆಲವು ತಿಂಗಳುಗಳಲ್ಲಿ ಬದಲಾಯಿಸಿದಂತೆ. ಅಲ್ಲದೆ ಈಗಾಗಲೇ ಕಷ್ಟಪಟ್ಟು ಸರಿತೂಗಿಸಿದ ಯೋಜನೆಗಿಂತ ಹೆಚ್ಚಿನ ಹಣ ಎಲ್ಲಿಂದ ಬರಬೇಕು ?

ಈಗಾಗಲೇ ಏಳನೆಯ ಯೋಜನೆಯಲ್ಲಿ ಹಾಕಿದ್ದ ಸಂಪನ್ಮೂಲಗಳ ಲೆಕ್ಕಾಚಾರ ಸರಿಯಾಗಿಲ್ಲ. ಜನರ ಮೇಲೆ ಕರಭಾರ, ಬೆಲೆ ಏರಿಕೆ ಹಾಕಿ ಹಿಂಡಿದರೂ ಬರುವ ಸಂಪನ್ಮೂಲವೇ ಸಾಲದು ಎಂಬ ಪರಿಸ್ಥಿತಿಯಲ್ಲಿ. ಬೇರೆ ಕಾರ್ಯಕ್ರಮಗಳಿಂದ ಹಣ ಈ ಅಂಶಗಳಿಗೆ ವರ್ಗಾಯಿಸುವುದು ಮಾತ್ರ ಸಾಧ್ಯ, ಇದನ್ನು ಮಾಡಿದರೆ ಪುನಃ ಏಳನೇಯ ಯೋಜನೆ ಬುಡಮೇಲು ಮಾಡಿದಂತೆ.

ಇಂತಹ ಪ್ರಶ್ನೆಗಳು 20 ಅಂಶದ ತಯಾರಕರಿಗೆ ಎದ್ದೇ ಇಲ್ಲ. ಯಾಕೆಂದರೆ ಇವರಿಗೆ ಏಳನೇಯ ಯೋಜನೆಯಾಗಲಿ, ಅದನ್ನು ಅಂಗೀಕರಿಸಿದ ರಾಷ್ಟ್ರೀಯ ಅಭಿವೃದ್ಧಿ ಆಯೋಗ (N D C) ಮತ್ತು 20 ಅಂಶ ಕಾರ್ಯಕ್ರಮವನ್ನು ಯಾವುದೇ ರೀತಿಯಲ್ಲಿ ಗಂಭೀರವಾಗಿ ತೆಗೆದುಕೊಂಡಿಲ್ಲ ಎಂದು ತೋರಿಸುತ್ತದೆ.

ಈ ಎಲ್ಲಾ ಯೋಜನೆಗಳೂ, ಕಾರ್ಯಕ್ರಮಗಳೂ ಜಾಹೀರಾತಿಗಾಗಿ ಮಾಡುವ ಸರ್ಕಸ್ಸಷ್ಟೇ.

ಅಂಶ 1 ರಿಂದ ಗರೀಬೀ ಹಟಾವೋ ಸಾಧ್ಯವೇ ?

ಈ ಕಾರ್ಯಕ್ರಮಗಳಿಗೆ ಹಣ ಎಲ್ಲಿಂದ ಒದಗಿಸುತ್ತಾರೆ ಎಂಬುದರ ಬಗ್ಗೆ ತಲೆ ಕೆರೆದುಕೊಳ್ಳುವುದು ಬಿಟ್ಟು ಬಿಟ್ಟು, ಎಲ್ಲಿಂದಲೋ ಹಣ ಬರುತ್ತದೆ ಎಂದಿಟ್ಟು ಕೊಂಡರೂ ಈ ಕಾರ್ಯಕ್ರಮ ಏನು ಸಾಧಿಸಲು ಸಾಧ್ಯವಿದೆ ? ಉದಾಹರಣೆಗೆ ಕೇವಲ ಎರಡು ಅಂಶಗಳನ್ನು ತೆಗೆದುಕೊಳ್ಳೋಣ.

"ಗ್ರಾಮೀಣ ಬಡತನದ ಮೇಲೆ ದಾಳಿ" ಮಾಡಬೇಕಾದ್ದು ಮುಖ್ಯವಾಗಿ IRDP ಮತ್ತು NREP ಕಾರ್ಯಕ್ರಮಗಳಿಂದಲೇ IRDP ಕಾರ್ಯಕ್ರಮದ ಬಗ್ಗೆ ಸರ್ಕಾರಿ ಸಮೀಕ್ಷೆಗಳೇ ಇದರ ಪ್ರಯೋಜನಗಳನ್ನು ಹಳ್ಳಿಯ ಶ್ರೀಮಂತರು ಬಡವರಿಂದ ದೋಚಿದ್ದಾರೆ ಎಂದು ತಿಳಿಸಿವೆ. ಇದಕ್ಕೆ ಸರ್ಕಾರಿ ಭಾಷೆಯಲ್ಲಿ "ಸವಲತ್ತು ಪಡೆಯುವವರ ಗುರುತಿಸುವಿಕೆಯಲ್ಲಿ ತಪ್ಪು" ಎಂದು ಹೇಳುತ್ತಾರೆ. ಇದೇ ರೀತಿ NREP ಯನ್ನು ಕೃಷಿ ಕಾರ್ಮಿಕರವರೆಗೆ ಒಯ್ಯಲು ಯಾವುದೇ ಸೂಕ್ತ ಸಂಘಟನೆ ಸರ್ಕಾರಕ್ಕಿಲ್ಲ ಎಂದು ಯೋಜನಾ ಆಯೋಗ ಒಪ್ಪಿಕೊಂಡಿದೆ. ಇದರ ಅರ್ಥ NREPಗೆ ವ್ಯಯವಾಗುತ್ತಿರುವ ಹಣ ಕೃಷಿ ಕಾರ್ಮಿಕರ ಬದಲು ಜಮೀನುದಾರ ಮತ್ತು ಕಂಟ್ರಾಕ್ಟರುಗಳ ಜೋಬು ತುಂಬುತ್ತಿದೆ ಎಂದು. ಈ ಹಿನ್ನೆಲೆಯಲ್ಲಿ ಇಂತಹ ಕಾರ್ಯಕ್ರಮಗಳಿಗೆ ಸ್ವಲ್ಪ ಹೆಚ್ಚು ಹಣ ಒದಗಿಸುವುದರಿಂದ "ಗ್ರಾಮೀಣ ಬಡತನದ ಮೇಲೆ ದಾಳಿ" ಮಾಡಿ ಬಡಿದೋಡಿಸಲು ಸಾಧ್ಯವೇ ?

ಅಂದರೆ ಗ್ರಾಮೀಣ ಬಡತನವನ್ನು ಹೋಗಲಾಡಿಸುವುದು "ಗರೀಬಿ – ಹಟಾವೊ" ಕಾರ್ಯಕ್ರಮಗಳಿಗೆ ಸ್ವಲ್ಪ ಹೆಚ್ಚು ಹಣ ಒದಗಿಸುವುದರಿಂದ ಸಾಧ್ಯವಿಲ್ಲ. ಇದು ಹಳ್ಳಿಗಳಲ್ಲಿ ವರ್ಗ – ಬಲಗಳನ್ನು ಬದಲಾಯಿಸುವುದರಿಂದ ಮಾತ್ರ ಸಾಧ್ಯ. ಹಳ್ಳಿಯ ವರ್ಗದ. ಬಲಾ ಬಲಗಳ ಸಮತೋಲನದ ಆಧಾರದ ಮೇಲೆ ಗದ್ದಿಗೆಯಲ್ಲಿರುವ ಸರ್ಕಾರ ಇದನ್ನು ಬಡವರ ಪರವಾಗಿ ಬದಲಾಯಿಸಲು ಮನಸ್ಸು ಮಾಡೀತೇ ?

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್, ಸಹಕಾರಿ ಮತ್ತಿತರ ಸ್ಥಾನೀಯ ಸಂಘಟನೆಗಳ ಪುನರುಜ್ಜೀವನದ ಬಗ್ಗೆ ಪ್ರಸ್ತಾಪವಿದೆ. ಆದರೆ ಸ್ವತಃ ಕಾಂಗ್ರೆಸ್ ಸರ್ಕಾರವೇ ಹೆಚ್ಚು ಕಡಿಮೆ ಎಲ್ಲಾ ರಾಜ್ಯದಲ್ಲಿ ಈ ಸ್ಥಾನೀಯ ಸಂಘಟನೆಗಳಿಗೆ (ಗ್ರಾಮ ಪಂಚಾಯತ್ ಮುಂತಾದ) ಚುನಾವಣೆಗಳನ್ನು 10–20 ವರ್ಷಗಳಿಂದ ಮುಂದೂಡುತ್ತಾ ಬಂದಿದೆ. ಇವು ಎಲ್ಲಿ ಹಳ್ಳಿಯ ಶ್ರೀಮಂತರ ಏಕಾಧಿಕಾರಕ್ಕೆ ಮುಳುವಾಗುತ್ತದೋ ಎಂದು ಸರ್ಕಾರಕ್ಕೆ ಭಯ. ಅಷ್ಟೇ ಅಲ್ಲದೆ ಗ್ರಾಮ ಪಂಚಾಯತು ಇತ್ಯಾದಿ ಚುನಾವಣೆ ನಡೆಸುವುದರಿಂದ ಮಾತ್ರ ಪುನರುಜ್ಜೀವನ ಮಾಡಲು ಸಾಧ್ಯವಾಗದು. ಎಡ ಚಳುವಳಿ ಪ್ರಬಲವಾಗಿರುವ ರಾಜ್ಯಗಳನ್ನು ಬಿಟ್ಟರೆ ಉಳಿದ ಕಡೆ ಹಳ್ಳಿಯ ಶ್ರೀಮಂತರು ಗ್ರಾಮ ಪಂಚಾಯತ್‌ಗಳ ಮೂಲಕವೇ ತಮ್ಮ ವರ್ಗ ಬಲವನ್ನು ಕಾಪಾಡಿಕೊಂಡು ಬೆಳೆಸಿಕೊಂಡುಬಂದಿದ್ದಾರೆ. ಗ್ರಾಮ ಪಂಚಾಯತುಗಳು ಇಂಥಲ್ಲಿ ವರ್ಗ ಶಕ್ತಿ ಚಲಾಯಿಸುವ ಉಪಕರಣಗಳಾಗಿವೆ. ಈ ಹಿನ್ನೆಲೆಯಲ್ಲಿ ಗರೀಬರ ಹಟಾವೋ ಆದೀತೇ ವಿನಾ "ಗರೀಬಿ ಹಟಾವೋ" ಖಂಡಿತಾ ಸಾಧ್ಯವಿಲ್ಲ.

ಭೂ ಸುಧಾರಣೆಗೂ ಇನ್ನೊಂದು ಅವತಾರ

ಇನ್ನೊಂದು ಅಂಶ ಗಮನಿಸಬೇಕಾದ್ದು ಭೂ ಸುಧಾರಣೆಗಳ ಬಗ್ಗೆ ಭೂಮಿ ಹಿಡುವಳಿಗಳ ದಾಖಲೆ ನೊಂದಾಣಿಕೆ, ಕೃಷಿ ಭೂಮಿಯ ಮಿತಿ ಜಾರಿ, ಮತ್ತು ಭೂ ಹೀನರಿಗೆ ಹೆಚ್ಚುವರಿ ಭೂಮಿ ಹಂಚಿಕೆ. ಭೂ ಮಿತಿ ಕಾಯಿದೆ ಬಂದು 30 ವರ್ಷಗಳ ನಂತರ. "ಗರೀಬಿ ಹಟಾವೋ"ದ 15 ವರ್ಷಗಳ ನಂತರ, 20 ಅಂಶ ಕಾರ್ಯಕ್ರಮದ ಮೊದಲನೆಯ ಅವತಾರದ 10 ವರ್ಷಗಳ ನಂತರ, ಮೂರನೇಯ ಅವತಾರದಲ್ಲಿ ಉದ್ಭವಿಸಬೇಕಾದ್ದೇ – ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸರ್ಕಾರದ "ಸಾಧನೆ"ಗಳಿಗೆ ಹಿಡಿದ ಕನ್ನಡಿ.

ಹೆಚ್ಚುವರಿ ಎಂದು "ಘೋಷಿಸಲ್ಪಟ್ಟ" ಭೂಮಿ ಹಿಂದೆ ಸರ್ಕಾರಿ ಸಮಿತಿಗಳೂ ನಿರ್ಧರಿಸಿದ ಭೂಮಿಯ 10ರಲ್ಲಿ ಒಂದು ಪಾಲು, ಮತ್ತು 70ರ ದಶಕದ ಕೊನೆಯಲ್ಲಿ ಭೂ ಸಮಿತಿ ತಪ್ಪಿಸಲು ಎಲ್ಲಾ "ಗೋಲ್‌ಮಾಲ್"ಗಳು ನಡೆದ ಮೇಲೆ ಯೋಜನಾ ಆಯೋಗ ಅಂದಾಜು ಮಾಡಿದ ಭೂಮಿಯ ಕಾಲು ಭಾಗವಷ್ಟೇ. ಒಟ್ಟಾರೆ ಹೇಳುವುದಾದರೆ ಸರ್ಕಾರಿ ಅಂಕಿ ಅಂಶಗಳ ಪ್ರಕಾರ ಮೊದಲು ಅಂದಾಜು ಮಾಡಿದ ಹೆಚ್ಚುವರಿ ಭೂಮಿಯ ಪ್ರತಿಶತ 2 ಭೂಮಿ ವಿತರಣೆಯಾದಂತಾಯಿತು.

(6ನೇ ಪುಟನೋಡಿ)

ಹಳ್ಳಿ ಹಳ್ಳಿಗೆ ಹಬ್ಬಲಿ ನಮ್ಮ

ರೈತ ಸಂಘ ಭಾರತದ ಎಲ್ಲಾ ಕಡೆ ಹಬ್ಬಬೇಕು, ಪ್ರತಿ ಹೋಬಳಿ, ರೆವಿನ್ಯೂ ಸರ್ಕಲ್‌ಗಳಲ್ಲಿ ನಮ್ಮ ಘಟಕವಿರಬೇಕು ಎಂಬುದು ನಮ್ಮ ಗುರಿ. ಇದನ್ನು ಸಾಧಿಸುವುದು ಹೇಗೆ ? ಅಖಿಲ ಭಾರತ ಕಿಸಾನ್ ಸಭಾದ ವಾರಾಣಾಸಿ ಸಮ್ಮೇಳನ ಇದನ್ನು ಸ್ಪಷ್ಟ ಮಾತುಗಳಲ್ಲಿ ವಿವರಿಸಿದೆ.

ನಮ್ಮ ದೇಶದ ಶತ ಕೋಟಿ ಪತಿಗಳಿಗೆ, ಸಹಸ್ರ ಕೋಟಿ ಮಾಲೀಕರಿಗೆ ಈಗ ಅವರ ಬಳಿ ಕೊಳೆಯುತ್ತಿರುವ ಹಣ ಸಾಲದೆಂಬಂತೆ ಸಾವಿರಾರು ಕೋಟಿಗಳನ್ನು ಸಲೀಸಾಗಿ ಪ್ರತಿದಿನವೂ ಟಿ.ವಿ., ಕಂಪ್ಯೂಟರ್, ಯಂತ್ರಗಳ ಮೇಲಿನ ತೆರಿಗೆ ರಿಯಾಯಿತಿಗಳ ಮೂಲಕ, ಹಾಗೂ ಸಹಾಯಧನಗಳ ಮೂಲಕ ನೀಡುತ್ತಿರುವ ಆಧುನಿಕ ದಾನಶೂರಕರ್ಣ ರಾಜೀವ್ ಗಾಂಧಿಯವರ ಆಡಳಿತದ ಧಾಳಿಗೆ ಸೀಮೆ ಎಣ್ಣೆ, ರಸಗೊಬ್ಬರ ಬೆಲೆ ಏರಿಕೆಗೆ ಗ್ರಾಮೀಣ ಬಡಜನತೆ ತುತ್ತಾಗಿ ಸಂಕಟ ಪಡುತ್ತಿದ್ದಾರೆ. ಇದರ ಜೊತೆಗೆ ವಿಶ್ವ ಬ್ಯಾಂಕಿನ ಬಹುರಾಷ್ಟ್ರೀಯ ಕಂಪೆನಿಗಳ ಕಾಟ. ಮತ್ತೀ ಇದೆಲ್ಲದರ ಮೇಲೆ ಮೊದಲೇ ಬಗ್ಗಿದ ರೈತ-ಕೃಷಿ ಕಾರ್ಮಿಕರನ್ನು ನೆಲ ಕಚ್ಚುವಂತೆ ಮಾಡುತ್ತಿರುವ ಭೂಮಾಲೀಕರ ಕ್ರೌರ್ಯ ಹಿಂಸೆಗಳು.

ಈ ಮೂರು ಧಾರಗಳ ಅಡಿಯಲ್ಲಿ ಸಿಕ್ಕಿ ನಲುಗುತ್ತಿರುವ ಕೃಷಿ-ಕಾರ್ಮಿಕ ರೈತರು ಜಾತಿ-ಜಾತಿಗಳ ಜಗಳದಲ್ಲಿ ಧರ್ಮ - ಧರ್ಮಗಳ ಕಿತ್ತಾಟದಲ್ಲಿ ತೊಡಗದೆ ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳುವ ನಿರಂತರ ಹೋರಾಟದಲ್ಲಿ ತೊಡಗಬೇಕಾದರೆ ರೈತ ಸಂಘಟನೆ ಬೃಹತ್ ಪ್ರಮಾಣದಲ್ಲಿ ಬೆಳೆಯಬೇಕು. ಹಳ್ಳಿ-ಹಳ್ಳಿ ಹಬ್ಬಬೇಕು, ಈ ಅಗತ್ಯ ಹಿಂದೆಂದಿಗಿಂತಲೂ ಇಂದು ಬಹಳ ಪ್ರಕಟವಾಗಿಯೇ ತೋರುತ್ತಿದೆ.

ಇದನ್ನು ಮಾಡುವುದು ಹೇಗೆ. ರೈತ ಸಂಘಟನೆಯನ್ನು ಬಲಪಡಿಸುವ ದಾರಿ ಯಾವುದು. ಇದನ್ನು ತೋರಿಸಿ ಕೊಟ್ಟದ್ದು 1979 ರಲ್ಲಿ ನಡೆದ ಅಖಿಲ ಭಾರತ ಕಿಸಾನ್ ಸಭಾದ ವಾರಣಾಸಿ ಸಮ್ಮೇಳನ.

ಕೆಲವು ಸಂಘಟನಾ ಬಲಹೀನತೆಗಳಿದ್ದು ಅವುಗಳನ್ನು ತಿದ್ದಿಕೊಳ್ಳಬೇಕೆಂದು ಸಮ್ಮೇಳನ ಕರೆಕೊಟ್ಟಿತು. ಆ ಬಲಹೀನತೆಗಳು ರಾಷ್ಟ್ರದ ಬಹುಸಂಖ್ಯಾತ ರಾಜ್ಯಗಳು ಎದುರಿಸುತ್ತಿದ್ದು ಕರ್ನಾಟಕ ರಾಜ್ಯ ಸಮಿತಿಯೂ ಅದರಲ್ಲೊಂದಾಗಿದೆ. ಅವುಗಳನ್ನು ಗುರುತಿಸಿ ಮೆಟ್ಟನಿಂತಾಗ ಮಾತ್ರ ರಾಜ್ಯ ಸಮಿತಿಯನ್ನು ಬಲಿಷ್ಠಗೊಳಿಸಲು, ರಾಜ್ಯದ ಬಹುಸಂಖ್ಯಾತ ರೈತ, ಕೃಷಿಕೂಲಿಕಾರರನ್ನು ಸಂಘಟಿಸಲಾದೀತು.

ಆಂತರಿಕ ಸಂಘಟನೆ ಕುರಿತು

ವಾರಣಾಸಿಯ ಕರೆಯ ಕುರಿತು ಚರ್ಚಿಸುವ ಮೊದಲು ಸಂಘಟನೆಯೆಂದರೇನು, ಕಿಸಾನ್ ಸಭಾ ಹಾಗೂ ಇತರೇ ಬಂಡವಾಳಶಾಹೀ ರೈತ ಸಂಘಟನೆಗಳಿಗಿರುವ ವ್ಯತ್ಯಾಸವನ್ನು ವಿವರಿಸುವುದು ಉಚಿತ.

ಯಾವುದೇ ಜನ ವಿಭಾಗವನ್ನು ವರ್ಗಗಳನ್ನು ಸಂಘಟಿಸಬೇಕಾದಲ್ಲಿ, ಸಾಮಾಜಿಕ ಉತ್ಪಾದನೆಯಲ್ಲಿ ಅವರ ಪಾತ್ರ ಹಾಗೂ ಸಂಬಂಧಗಳನ್ನಾಧರಿಸಿ ಧೋರಣೆಯನ್ನು ಆ ಧೋರಣೆಗೆ ಪೂರಕವಾಗಿ ಸಂವಿಧಾನವನ್ನು ರೂಪಿಸಲಾಗುತ್ತದೆ. ಕಿಸಾನ್ ಸಭಾ ಧೋರಣೆ ಎಷ್ಟು ಪ್ರಮುಖವೋ, (ಸಂವಿಧಾನ) ಸಂಘಟನಾ ನಿಯಮಗಳೂ ಅಷ್ಟೇ ಮುಖ್ಯ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಾಣ್ಯಕ್ಕೆ ಒಂದು ಮುಖವಿದ್ದಲ್ಲಿ ತೂಕದ ಮೌಲ್ಯವಿದ್ದರೂ ಚಲಾವಣೆಯಾಗಲಾರದು. ಹಾಗೆ ಧೋರಣೆ ಮತ್ತು ಆಂತರಿಕ ಸಂಘಟನೆ ಒಂದಕ್ಕೊಂದು ಪೂರಕವಾಗಿದೆ.

ಅಖಿಲ ಭಾರತ ಕಿಸಾನ್ ಸಭಾ ಕೃಷಿ ಕೂಲಿ ಕಾರರಿಂದ ಶ್ರೀಮಂತ ರೈತರನ್ನೊಳಗೊಂಡಂತೆ ಸಂಘಟಿಸಿ ಉಳುವವನೇ ಭೂ ಒಡೆಯನಾಗಲು ಬಂಡವಾಳ ಶಾಹಿ ವರ್ಗ ಮುಗಿಸದೇ ಇದ್ದ ಕೃಷಿ ಕ್ರಾಂತಿಯನ್ನು ಗ್ರಾಮೀಣ ದುಡಿಯುವ ವರ್ಗವನ್ನು ನಗರದ ಕಾರ್ಮಿಕರ ಮುಂದಾಳತ್ವದಲ್ಲಿ ಜನತಾ ಪ್ರಜಾ ಪ್ರಭುತ್ವ ಕ್ರಾಂತಿಯ ಮುಖಾಂತರ, ಅಂದರೆ ಪ್ರಸ್ತುತ ಗುತ್ತೇದಾರಿ ಬಂಡವಾಳ ಶಾಹಿ-ಭೂಮಾಲೀಕ ಪ್ರಭುತ್ವವನ್ನು ಅಧಿಕಾರದಿಂದ ಕಿತ್ತೆಸೆಯುವದಾಗಿದೆ. ದುಡಿಯುವ ವರ್ಗದ ಸರ್ವಾಧಿಕಾರವನ್ನು ಅಸ್ತಿತ್ವಕ್ಕೆ ತರುವುದಾಗಿದೆ. ಈ ಧೋರಣೆಯನ್ನಾಧರಿಸಿ ಕಿಸಾನ್ ಸಭಾ ಸಂವಿಧಾನ ದೇಶದ ಗ್ರಾಮದ ರೈತ-ಕೃಷಿ ಕೂಲಿಕಾರರನ್ನೊಳಗೊಂಡು ಗ್ರಾಮ ಸಮಿತಿಗಳಿಂದ ತಾಲ್ಲೂಕು, ಜಿಲ್ಲಾ, ರಾಜ್ಯ ಸಮಿತಿಯಿಂದ ಬಲಿಷ್ಠ ಕೇಂದ್ರ ಸಮಿತಿಯನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ದುಡಿಯುವ ರೈತ ಕೂಲಿಕಾರರಿಂದಲೇ ಚುನಾಯಿತ ಸಮಿತಿಗಳನ್ನು ಆಯ್ಕೆ ಮಾಡುವುದಾಗಿದೆ. ಆಳುವ ವರ್ಗದ ವಿರುದ್ಧ ಗ್ರಾಮೀಣ ದುಡಿಯುವ ವರ್ಗವನ್ನು ಸಂಘಟಿಸುವ ಹಿನ್ನೆಲೆಯಿದ್ದ ಕಾರಣ ಬಹು ಸಂಖ್ಯಾತ ಕೃಷಿ ಕೂಲಿಕಾರ ಸಂಘಟನೆಯನ್ನು ಬಡರೈತರ ನೇತೃತ್ವದಲ್ಲಿ, ಅವರು ಪ್ರಭುತ್ವವನ್ನು ಅರಿಯುವಂತಾಗಲು, ಕಿತ್ತುಹಾಕಲು ತಯಾರಿ ಮಾಡುವಂತಾಗಲು ಅನುಕೂಲವಾಗುವಂತೆ ಸಂವಿಧಾನ ಆಂತರಿಕ ಸಂಘಟನೆಯಿರುತ್ತದೆ.

ಸಂಘಟನಾ ಗುರಿಗಳು

1. 50 ಸಾವಿರ ಹೊಸ ಹಳ್ಳಿಗಳನ್ನು ತಲುಪುವುದು.
2. ಒಂದು ಕೋಟಿ ರೈತ ಸದಸ್ಯತ್ವ ಸಾಧಿಸುವುದು.
3. ದೇಶದ ಎಲ್ಲ ಹೋಬಳಿಗೆ ಕಿಸಾನ್ ಸಭಾದ ಸಂದೇಶ ಒಯ್ಯುವುದು.

ಈ ಧೋರಣೆಯನ್ನು ಮತ್ತು ನಗರದ ಕಾರ್ಮಿಕ, ನೌಕರರ ದುಡಿಯುವ ಜನರನ್ನು ವಿರೋಧಿಸುವ ರೈತ ಸಂಘಟನೆಗಳೂ ಕೂಡಾ ರೈತರನ್ನು ಸಂಘಟಿಸಿ ದೀರ್ಘ ಚಳುವಳಿಯನ್ನು ನಡೆಸಬಹುದು, ಅವು ರೈತರ ಕೆಲವು ತಾತ್ಕಾಲಿಕ ಪರಿಹಾರಗಳನ್ನು ಒದಗಿಸಲು, ಕೆಲವು ಸುಧಾರಣೆಗಳನ್ನು ತರಲು ಮಾತ್ರ ಸಾಧ್ಯ, ಆದರೆ ಅಂತಹ ರೈತ ಸಂಘಟನೆಗಳು ರೈತ ಕೂಲೀಕಾರರ ಶಾಶ್ವತ ವಿಮೋಚನೆಯನ್ನು ಬಯಸಲಾರವು. ಹಾಗೂ ಆಳುವ ಗುತ್ತೇದಾರಿ, ಬಂಡವಾಳ ಶಾಹಿ-ಭೂಮಾಲೀಕ ಪ್ರಭುತ್ವವನ್ನು ಇಡಿಯಾಗಿ ವಿರೋಧಿಸದೆ, ಅವು ಅಸ್ತಿತ್ವದಲ್ಲಿದ್ದು ಕೆಲವು ಸೌಲಭ್ಯಗಳನ್ನು ಮಾತ್ರ ರೈತರಿಗೆ ಕೊಡಬೇಕೆಂದು ಆಶಿಸುವದಾಗಿದೆ. ಅಂದರೆ ಆಳುವ ವರ್ಗದ ವಿರೋಧಿಯಲ್ಲವೆಂದರೆ ಅವುಗಳ ಪರವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಾಪಾಡುವ ರೈತ ಸಂಘಟನೆಗಳಾಗಿರುತ್ತವೆ. ಇಂತಹ ರೈತ ಸಂಘಟನೆಗಳು ಸುಧಾರಣಾವಾದಿ ಧೋರಣೆಯನ್ನು ಅಧರಿಸಿದ ಆಂತರಿಕ ಸಂಘಟನೆಯನ್ನು ಹೊಂದಿರುತ್ತವೆ.

ಅಂದರೆ ಆಳುವ ವರ್ಗ ಪ್ರಭುತ್ವದ ವಿರುದ್ಧ ದುಡಿಯುವ ರೈತಾಪಿ ವರ್ಗವನ್ನು ತಯಾರಿ ಮಾಡಲು ಈ ಸಂಘಟನೆಗಳು ಆಶಿಸಲಾರವು. ಆದ್ದರಿಂದ ಪ್ರಜಾಸತ್ತಾತ್ಮಕವಾಗಿ ರೈತ ಕೃಷಿ ಕೂಲಿ ಕಾರರುಗ್ರಾಮಸಮಿತಿ, ಮೇಲಿನ ಸಮಿತಿಗಳಲ್ಲಿ ಪಾಲುಗೊಂಡು ಆಳುವ ವರ್ಗದ ವಿರುದ್ಧ ಹೋರಾಟ ನಡೆಸುವ ಪ್ರಜ್ಞೆಯನ್ನು ಪಡೆಯದಂತೆ ತಡೆಗಟ್ಟುವ ಆಂತರಿಕ ಸಂಘಟನೆಯನ್ನು ಹೊಂದಿರುತ್ತವೆ. ರಾಜ್ಯ, ಜಿಲ್ಲೆ, ತಾಲ್ಲೂಕು ಅಥವಾ ಗ್ರಾಮಗಳಲ್ಲಿ ಈ ಧೋರಣೆಯಿರುವಸಂಘಟನೆಗಳು ಪ್ರಜಾಸತ್ತಾತ್ಮಕ ಚುನಾವಣೆಗಳನ್ನು ನಡೆಸದೆ ಒಬ್ಬ ಅಧ್ಯಕ್ಷ, ಸಂಚಾಲಕ ಅಥವಾ ಕೆಲವು ಸಲ ಸಮಿತಿಯಂತಲೂ ನೇಮಕವನ್ನು ಮಾಡಲಾಗುತ್ತದೆ. ಮೇಲಿನಿಂದ ಬಂದ ನಿರ್ದೇಶನಗಳನ್ನು ಪಾಲನೆ ಮಾಡುವುದು ಮಾತ್ರ ಈ ಕೆಳ ಸಮಿತಿಗಳ ಕರ್ತವ್ಯವಾಗಿರುತ್ತದೆ. ಮೇಲ್ಮಟ್ಟದ ರಾಜಕೀಯ ಪ್ರಜ್ಞೆಯನ್ನು ಪಡೆಯಲು ಅವಕಾಶವಿರಲಾರದು, ಅಂದರೆ ಆಳುವ ವರ್ಗ ವ್ಯವಸ್ಥೆಯನ್ನು ಬಯಲಿಗೆಳೆದು ಅರಿಯುವಂತೆ ಅವಕಾಶಗಳನ್ನೊದಗಿಸದೆ ಆ ಪ್ರಭುತ್ವವನ್ನು ರಕ್ಷಿಸುವ ಅದರ ಒಂದು ಭಾಗವಾಗಿ ಕಾರ್ಯ ನಿರ್ವಹಿಸುವಂತಹ ತಿಳುವಳಿಕೆಯನ್ನು ಕೊಡುತ್ತದೆ.

ಈ ಹಿನ್ನೆಲೆಯಲ್ಲಿ ಕಿಸಾನ್ ಸ[...]
ಹಾಗೂ ಇತರ ರೈತ ಸಂಘಗಳ ಆಂತರ[...]
ಸಂಘಟನೆಯಲ್ಲಿರುವ ಮೂಲ ಭೂ[...]
ವ್ಯತ್ಯಾಸವಿದೆ.

ವಾರಣಾಸಿ ಕರೆ ಹಾಗೂ ನಮ್ಮ ಕರ್ತವ್ಯಗಳು

ಸ್ವಾತಂತ್ರ್ಯಾನಂತರ ಪಾಳೆಯಗಾ[...] ಭೂಸಂಬಂಧಗಳನ್ನು ಬಂಡವಾಳಶಾಹಿ[...] ಕರಣಗೊಳಿಸುವುದನ್ನು[...] ಮಾತ್ರ ಮಾಡಲುಕೆಲವುಭೂಸುಧಾರ[...] ಗಳು ಜಾರಿಗೆ ಬಂದು, ಒಂದು[...] ಶ್ರೀಮಂತ ರೈತ ವರ್ಗ ವಿಭಾಗವನ್ನು[...] ಹುಟ್ಟು ಹಾಕಲು ಸಾಧ್ಯವಾಗಿದ್ದು,[...] ಗುತ್ತೇದಾರಿ ಬಂಡವಾಳಶಾಹಿಗ[...] ಕೇಂದ್ರೀಕೃತ ಗ್ರಾಮೀಣ ದುಡಿಯುವ[...] ವರ್ಗ ವಿರೋಧಿ ನೀತಿಯಿಂದಾಗಿ,[...] ವ್ಯಾಪಕ ಬಡತನ ಹೆಚ್ಚಾಗಿ, ನೂರಕ್ಕೆ[...] ಎಪ್ಪತ್ತರಷ್ಟು ಕೃಷಿ ಕೂಲಿಕಾರ ಬಡ[...] ರೈತರ ಸಂಖ್ಯೆಯಾಗಿದ್ದು, ಇಡೀ[...] ರೈತಾಪಿ ಜನತೆ ಬೆಳೆದ ಮಾಲಿಗ[...] ಬೆಂಬಲಿತ ಬೆಲೆಯಿಲ್ಲದೆ, ಕೈಗಾರಿಕಾ[...] ವಸ್ತುಗಳ ಬೆಲೆ ಗಗನಕ್ಕೇರುತ್ತಿರು[...] ವಾಗ, ಇಡೀ ಗ್ರಾಮೀಣ ರೈತ[...] ಸಮುದಾಯ ಅತೃಪ್ತಿಯಿಂದ ಕುದಿಯುತ್ತಿದೆ. ಅದನ್ನು ಬಳಸಿಕೊಂಡು[...] ವಿಶಾಲ ಹೋರಾಟಗಳನ್ನು ಕಿಸಾನ್[...] ಸಭಾ ರೂಪಿಸುವಂತಾಗಲು ಈ ಕೆಳಗಿನ[...] ಬಲಹೀನತೆಗಳನ್ನು ತಿದ್ದಿಕೊಳ್ಳಲು[...] ವಾರಣಾಸಿ ಸಮ್ಮೇಳನ ಕರೆಕೊಟ್ಟಿತು.

1) ಅತೃಪ್ತಿಯಿಂದ ರೈತಾಪಿ[...] ವರ್ಗದ ಯಾವುದೇ ವಿಭಾಗ ತನ್ನ[...] ಆರ್ಥಿಕ ಸಾಮಾಜಿಕ ಬೇಡಿಕೆಗಳ[...] ನ್ನಿಟ್ಟು ಒಮ್ಮಿಂದೊಮ್ಮೆಲೇ ಬೀದಿಗಿಳಿ[...] ದಾಗ ಕಿಸಾನ್ ಸಭಾ ಯಾವ[...] ಸಂಕೋಚಗಳಿಲ್ಲದೆ ಅದರಲ್ಲಿ ಧುಮುಕಿ[...] ಸರಿಯಾದ ರೀತಿಯಲ್ಲಿ ಮುಂದೆ[...] ಕೊಂಡೊಯ್ಯಬೇಕು. ಹೆಚ್ಚಿನ[...] ಇಂತಹ ಸಣ್ಣ ಪುಟ್ಟ, ದೊಡ್ಡ ಚಳು[...] ವಳಿಗಳನ್ನು ಬಂಡವಾಳಶಾಹಿ ಪಕ್ಷಗಳ[...] ದಲ್ಲಾಳರು, ಗ್ರಾಮೀಣ ಪುಢಾರಿಗಳು,[...] ಕೆಲವೊಮ್ಮೆ, ಯಾವ ರಾಜಕೀಯ[...] ಅರಿಯದ ಮುಗ್ಧ ರೈತರು ಸ್ವತಃ[...] ಆಳುವ ವರ್ಗದ ದೌರ್ಜನ್ಯದ ವಿರುದ್ಧ[...] ಪ್ರತಿಭಟನೆಗಿಳಿಯುತ್ತಾರೆ. ಅಂತಹ[...] ಯಾವದೇ ಸಮಯದಲ್ಲಿ ಕಿಸಾನ್[...] ಸಭಾ ಕೈಹಾಕದೆ ಹೋದಲ್ಲಿ[...] ಪುಢಾರಿಗಳು ತಮ್ಮ ವೈಯುಕ್ತಿಕ,[...] ಅಥವಾ ಮೇಲ್ವರ್ಗ ವಿಭಾಗದ ಸ್ವಾರ್ಥ[...] ಈಡೇರಿದೊಡನೆ ಚಳುವಳಿಗಳನ್ನು[...] ತಡೆಯಲಾಗಿ ರೈತಾಪಿ ಜನತೆಗೆ[...] ಹೋರಾಟದಲ್ಲಿ ವಿಶ್ವಾಸ ಹೋಗುತ್ತದೆ.

ರೈತ ಸಂಘದ ಬಳ್ಳಿ

ಇಲ್ಲವಾದಲ್ಲಿ ತಪ್ಪು ಹಾದಿಯಲ್ಲಿ ಹೋರಾಟದ ದಿಕ್ಕನ್ನು ಬದಲಾಯಿಸುವ ಮುಖಾಂತರ ಆಳುವ ವರ್ಗಗಳಿಂದ ದಮನಿಸಲ್ಪಡಲಾಗುತ್ತವೆ. ಇಲ್ಲವಾದಲ್ಲಿ ಕೋಮು, ಗುಂಪು ಘರ್ಷಣೆಯಲ್ಲಿಯೋ, ಅಧಿಕಾರಿಗಳು, ಪೋಲಿಸರನ್ನೇ ತಮ್ಮ ಶತೃಗಳೆಂಬ ಮಟ್ಟಕ್ಕೆ ಹೋರಾಟಗಳು ನಿಂತು ಹೋಗುತ್ತವೆ. ಕಾರಣ ಕಿಸಾನ್ ಸಭಾದ ಕಾರ್ಯಕರ್ತರು ಯಾವುದೇ ಬಿಡೆಯಿಲ್ಲದೇ ಇಂತಹ ಹೋರಾಟಗಳಲ್ಲಿ ಪಾಲುಗೊಂಡು ಅವುಗಳನ್ನು ಮುಂದೆ ಕೊಂಡೊಯ್ದು ಸಂಘಟಿತ ರೂಪಕ್ಕೆ ತಂದು ಆಳುವ ವರ್ಗದ ವಿರುದ್ಧ ಅಣಿನೆರೆಸುವಂತಾಗಬೇಕು.

2) ಜಂಟೀ ಹೋರಾಟಗಳ ಕುರಿತಾಗಿ – ಕಿಸಾನ್ ಸಭಾ ಧೋರಣೆಯನ್ನು ಹೊಂದಿದ ರೈತ ಸಂಘಟನೆಗಳು ಹಲವಾರು ಹಂತದಲ್ಲಿ ಅಸ್ತಿತ್ವದಲ್ಲಿರುತ್ತವೆ. ಕೆಲವೊಮ್ಮೆ ದೀರ್ಘ ಚಳುವಳಿಗಳನ್ನೇ ನಡೆಸುತ್ತವೆ. ಅವು ಬಂಡವಾಳಶಾಹಿ ಪರ ರೈತ ಸಂಘಟನೆಗಳು ಎಂಬುದು ನಿರ್ವಿವಾದ. ಆದರೆ ಅವರು ನಡೆಸುವ ಹೋರಾಟ ಪ್ರಯೋಜನವೇಯಿಲ್ಲವೆಂದು ಭಾವಿಸುವುದು ತಪ್ಪು. ಸ್ವತಂತ್ರವಾಗಿ ಕಿಸಾನ್ ಸಭಾ ಚಳುವಳಿ ನಡೆಸುವುದರ ಜೊತೆಗೆಯೇ ಇಂತಹ ರೈತ ಸಂಘಟನೆಗಳ ಜೊತೆ ಯಾವುದೇ ಹಂತದಲ್ಲಿ (ತಾಲ್ಲೂಕು, ಜಿಲ್ಲಾ, ಪ್ರದೇಶ, ರಾಜ್ಯ, ರಾಷ್ಟ್ರ) ರೈತಾಪಿ ವರ್ಗದ ನಿರ್ದಿಷ್ಟ ಬೇಡಿಕೆಗಳನ್ನೂ ಆಧರಿಸಿ ಜಂಟೀ ಸಮಾವೇಶ, ಕಾರ್ಯಕ್ರಮ ರೂಪಿಸಿ ಹೋರಾಟಗಳನ್ನು ನಡೆಸುವುದು ಅತ್ಯವಶ್ಯ. ಮುಗ್ಧ ರೈತಾಪಿ ವರ್ಗ ಇಂತಹ ರೈತ ಸಂಘಟನೆಗಳನ್ನು ನಂಬಿ ಕೂತಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಅಂತಹ ಹೋರಾಟಗಳಿಂದ ಆಳುವ ವರ್ಗದ ವಿರುದ್ಧ ತೀವ್ರ ಹೋರಾಟಗಳನ್ನು ರೂಪಿಸುವ ಮುಖಾಂತರ ಅವರ ರಾಜಕೀಯ ಪ್ರಜ್ಞೆ, ಹೆಚ್ಚು ಸವಲತ್ತುಗಳನ್ನು ಬೇಡುವ ಪ್ರಜ್ಞೆಯನ್ನು ಮೂಡಿಸುವ ಮುಖಾಂತರ, ಬಂಡವಾಳಶಾಹಿ ರೈತ ಸಂಘಗಳನ್ನು ಅರಿತು ಮುಂದಿನ ಹೋರಾಟಕ್ಕೆ ರೈತರನ್ನು ಅಣ್ವಾಸಿಸಲು ಸಾಧ್ಯವಾಗುತ್ತದೆ.

3) ಬಲಿಷ್ಟವಾದ ಮೇಲಿನ ಸಮಿತಿಗಳನ್ನು ಕಟ್ಟುವುದು–ಕಿಸಾನಸಭಾ ಧೋರಣೆ ಆಳುವ ವರ್ಗ ಧೋರಣೆಗಿದಿರಾಗಿ, ಇಡೀಯಾಗಿ ಅದನ್ನು ಅಧಿಕಾರದಿಂದ ಕಿತ್ತುಹಾಕಿ ಪರ್ಯಾಯವಾಗಿ ದುಡಿಯುವ ರೈತಾಪಿವರ್ಗದ ಪರವಾದ ಧೋರಣೆಯನ್ನು ರೂಪಿಸಿರುವುದಾಗಿರುತ್ತದೆ. ಈ ತಿಳುವಳಿಕೆ ಕೆಳಹಂತದ ಸಮಿತಿಗಳಲ್ಲಿ, ಯಾವುದೇ ಒಂದು ಸಮಿತಿ, ಒಂದು ಭಾಗದಲ್ಲಿ ರೂಪಿಸಲಾಗದು ಕಾರಣ ಈ ಉನ್ನತ ತಿಳುವಳಿಕೆ, ಕೆಳಸಮಿತಿಗಳ ಅನುಭವ ವರದಿಯನ್ನು ಮೇಲೆ ಕಳಿಸುವ ಮುಖಾಂತರ, ಅದರಿಂದಲೇ ಚುನಾಯಿಸಲ್ಪಟ್ಟಿರುವ ಕೇಂದ್ರ ಸಮಿತಿಗೆ ಮಾತ್ರ ಈ ಉನ್ನತ ತಿಳುವಳಿಕೆಯನ್ನು ಪಡೆಯಲು ಸಮಗ್ರ ಧೋರಣೆಯನ್ನು ರೂಪಿಸಲು ಸಾಧ್ಯ. ಕಾರಣ ಈ ತಿಳುವಳಿಕೆಯನ್ನು ಮೇಲಿನಿಂದ ಕೆಳಗೆ, ಕೆಳಗಿನಿಂದ ಅನುಭವವನ್ನು ಧೋರಣೆಯ ಜಾರಿಯ ಕುರಿತು ಮೇಲೆ ಕಳಿಸುವ ಮುಖಾಂತರ ಮಾತ್ರ ಸಂಘಟನೆಯನ್ನು ಒಟ್ಟುಗೂಡಿಸಲು ಸಾಧ್ಯ. ಕಾರಣ ಕಿಸಾನ ಸಭಾದ ಕೇಂದ್ರ ಬಲಿಷ್ಟಗೊಳಿಸದೆ ರಾಜ್ಯ, ಜಿಲ್ಲಾ, ಇತರೆ ಸಮಿತಿಗಳನ್ನು ಬಲಿಷ್ಟಗೊಳಿಸಲಾಗದು. ಈ ಕರ್ತವ್ಯವನ್ನು ಪಾಲನೆ ಮಾಡಲು ಧೋರಣೆಯನ್ನು ಕಿಸಾನ್‌ಸಭಾದ ಬದಲಾಗುವ ನೀತಿಯನ್ನು ಕಾಲಕಾಲಕ್ಕೆ ಹೆಚ್ಚೆಚ್ಚು ಅಭ್ಯಾಸ ಮಾಡುವ ಮುಖಾಂತರ ಅದರ ಹಾಗೂ ಇತರ ಮೇಲಿನ ಸಮಿತಿಯ ಕರೆಗಳನ್ನು ಚಾಚೂ ತಪ್ಪದೆ ಜಾರಿ ಮಾಡುವಮುಖಾಂತರದ ಇನ್ನೊಂಡೆಡೆ ಕೆಳಗಿನ ಅನುಭವ, ಆಗುವ ಬದಲಾವಣೆಗಳನ್ನು ಕೂಲಂಕುಷವಾಗಿ, ತಾಲ್ಲೂಕು, ಜಿಲ್ಲಾ, ರಾಜ್ಯ ಸಮಿತಿಗಳ ಮುಖಾಂತರ, ಯಾವುದೇ ಪರಿಸ್ಥಿತಿಯಲ್ಲಿ ತಪ್ಪದೆ ವರದಿಗಳನ್ನು ಕಳಿಸುವ ಮುಖಾಂತರ ಮಾತ್ರ ಬಲಿಷ್ಟ ಕೇಂದ್ರ ರಾಜ್ಯ ಹಾಗೂ ಜಿಲ್ಲಾ ಸಮಿತಿಗಳನ್ನು ಕಟ್ಟಲು ಸಾಧ್ಯವಾಗುತ್ತದೆ. ಬಹುಸಂಖ್ಯಾತ ರೈತವರ್ಗವನ್ನು ಸಂಘಟನೆಯ ವ್ಯಾಪ್ತಿಗೆ ತರಲು ಸಾಧ್ಯವಾಗುತ್ತದೆ.

4) ಆಳವಾದ ಅಭ್ಯಾಸ–ಒಂದೆಡೆ ಕಿಸಾನ್‌ಸಭಾ ಧೋರಣೆಯನ್ನು ಆಳವಾಗಿ ಅರಿಯುವದರ ಜೊತೆಗೆ ಆಳುವ ವರ್ಗದ ಧೋರಣೆಯ ಪರಿಣಾಮವಾಗಿ ಗ್ರಾಮೀಣ ಪ್ರದೇಶದಲ್ಲಿ ಆಗುವ ಬದಲಾವಣೆಗಳು, ಭೂಸಂಬಂಧಗಳ ಕುರಿತು ಬಂಡವಾಳಶಾಹಿ ಕ್ರಿಯೆ ಹೇಗೆ, ಎಷ್ಟಾಗುತ್ತದೆ, ಬಂಡವಾಳಶಾಹಿ ಆಳುವ ವರ್ಗ ಕೊಡುವ ಸವಲತ್ತುಗಳು ಅವುಗಳ ಪರಿಣಾಮಗಳನ್ನು ಅರಿಯುವುದು ಹಾಗೂ ಆ ಸೌಲಭ್ಯಗಳು ಹೇಗೆ ರೈತಾಪಿ ವರ್ಗವನ್ನು ಮೋಸ ಮಾಡಲು ರೂಪಿಸಲ್ಪಟ್ಟಿದೆಯೆಂದು ಬಯಲಿಗೆಳೆಯಲು ಜೊತೆಗೆ, ಆ ಸೌಲಭ್ಯಗಳನ್ನು ಬಳಸಿಕೊಂಡು ರೈತರನ್ನು ಪುಢಾರಿಗಳಿಂದ ದೂರ ಸರಿಸಿ ಸಂಘಟನೆಯನ್ನು ಮುಂದೆ ಕೊಂಡೊಯ್ಯಲು ಪ್ರಯೋಜನ ಪಡೆಯುವದಾಗಿದೆ. ಆಳವಾದ ಸಮಗ್ರವಾದ ಅಭ್ಯಾಸ, ಆಲೋಚನೆ, ಚಿಂತನೆಯಿಲ್ಲವಾದಲ್ಲಿ ಕಿಸಾನ್‌ಸಭಾ ಕಾರ್ಯಕರ್ತರು ಕೂಡ ಸುಧಾರಣವಾದಿ ಹಾದಿಯಲ್ಲಿ ಮುಂದುವರಿಯುವಂತಾಗುತ್ತದೆ.

ಚಂದ್ರಶೇಖರ ಬಾಳೆ

[ಆರನೇ ಪುಟ ನೋಡಿ]

ಕರ್ನಾಟಕದಲ್ಲಿ ಭೂ ಸುಧಾರಣೆಯ ಫಲ

ಕರ್ನಾಟಕದಲ್ಲಿ 1965 ರಲ್ಲಿ ಜಾರಿಗೆ ಬಂದ 1961ರ ಕರ್ನಾಟಕ ಭೂ ಸುಧಾರಣಾ ಅಧಿನಿಯಮದಿಂದ ಏನೂ ಪ್ರಯೋಜನವಾಗಲಿಲ್ಲವೆಂದು 1974 ರಲ್ಲಿ ತಿದ್ದುಪಡಿ ತರಲಾಯಿತು. ಈ ತಿದ್ದುಪಡಿ ಇಡೀ ದೇಶದಲ್ಲಿಯೇ ಅತಿ ಹೆಚ್ಚು ಕ್ರಾಂತಿಕಾರಿ ನಿಯಮವೆಂದೂ ಡಂಗೂರ ಹೊಡೆಯಲಾಯಿತು. ಈ ತಿದ್ದುಪಡಿಯಿಂದ ಕೆಲವು ಸೀಮಿತ ಪ್ರಯೋಜನಗಳು ಎಡಚಳುವಳಿಗಟ್ಟಿಯಾಗಿದ್ದ ಕೆಲವು ಸೀಮಿತ ಪ್ರದೇಶಗಳಲ್ಲಿ ದೊರಕಿವೆಯಾದರೂ ಒಟ್ಟಾರೆಯಾಗಿ ಭೂ ಒಡೆತನದ ಪರಿಸ್ಥಿತಿ ಅಲುಗಾಡದೆ ಹಾಗೇ ಇದೆ ಎಂಬುದನ್ನು ನೋಡಬಹುದು.

ಪಟ್ಟಿ 1ರಲ್ಲಿ 76–77ರಲ್ಲಿ ಇದ್ದ ಭೂ ಒಡೆತನದ ಪ್ರಮಾಣ ಹಾಗೂ 80–81ರಲ್ಲಿ ಇದ್ದ ಭೂ ಒಡೆತನದ ಪ್ರಮಾಣವನ್ನು ಹೋಲಿಸಿದೆ.

ಪ. ಬಂಗಾಲ 1967 ರಿಂದ 69ರಲ್ಲಿ ಯಶಸ್ವಿಯಾಗಿ ಭೂ ಸುಧಾರಣೆ ಆಳವಡಿಸಿದ ನಂತರದ ಪರಿಸ್ಥಿತಿಯನ್ನು ಕರ್ನಾಟಕದ ಭೂ ಒಡೆತನದ ಪರಿಸ್ಥಿತಿಯೊಂದಿಗೆ ಹೋಲಿಸಿದರೆ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ. (ಪಟ್ಟಿ 2)

ಪಟ್ಟಿ 1: ಕರ್ನಾಟಕದ ಭೂ ಒಡೆತನ

	1976-77	(ಶೇಕಡವಾರು)	1980-81	
ವರ್ಗ	ಹಿಡುವಳಿದಾರರ ಸಂಖ್ಯೆ ಪ್ರಮಾಣ	ವಿವಿಧ ವರ್ಗದ ಭೂಮಿಯ ಮೇಲಿನ ಹಿಡಿತ	ಹಿಡುವಳಿದಾರರ ಸಂಖ್ಯೆ ಪ್ರಮಾಣ	ವಿವಿಧ ವರ್ಗದ ಭೂಮಿಯ ಮೇಲಿನ ಹಿಡಿತ
1-00 ಎಕರೆಗಿಂತ ಕಡಿಮೆ	31.4	5.6	34.4	6.2
1–2	23.3	11.6	24.5	13.2
2–4	21.5	20.1	21.3	21.9
4–10	16.6	34.0	15.5	34.3
10 ಕ್ಕಿಂತ ಹೆಚ್ಚು	5.2	28.7	4.3	24.4

ಪಟ್ಟಿ 2 ; ಪ. ಬಂಗಾಳದ ಭೂ ಒಡೆತನ

	1976-77		1980-81	
ವರ್ಗ	ಹಿಡುವಳಿದಾರರ ಸಂಖ್ಯೆ ಪ್ರಮಾಣ	ವಿವಿಧ ವರ್ಗದಭೂಮಿಯ ಮೇಲಿನ ಹಿಡಿತ	ಹಿಡುವಳಿದಾರರ ಸಂಖ್ಯೆ ಪ್ರಮಾಣ	ವಿವಿಧ ವರ್ಗದಭೂಮಿಯ ಮೇಲಿನ ಒಡೆತನ
1–00 ಎಕರೆಗಿಂತ ಕಡಿಮೆ	66.5	27.1	69.7	29.2
1-2	20.6	28.5	19.6	31.2
2–4	10.4	27.1	8.8	25.2
4–10	·25	13.9	1.9	10.7
10 ಕ್ಕಿಂತ ಹೆಚ್ಚು	—	—	—	—

ಕುಂದಾಪುರದ ಕೃಷಿ ಕಾರ್ಮಿಕರ ಹೋರಾಟ – ಒಂದು ನೆನಪು

● ಪಿ. ರಾಮಚಂದ್ರ ರಾವ್

ಕುಂದಾಪುರ ತಾಲ್ಲೂಕಿನಲ್ಲಿ ಕುಂದಾಪುರ ಪೇಟೆಯಿಂದ ಸುಮಾರು 10 ಕಿ.ಮಿ. ದೂರದಲ್ಲಿರುವ ಆನ್‌ಗಲ್ ಎಂಬ ಗ್ರಾಮ. ಅಲ್ಲಿ ಗೋಪಾಲ ಎಂಬ ಬಡ ಕೃಷಿ–ಕೂಲಿಗಾರ. ಒಂದು ಸಣ್ಣ ಗುಡಿಸಿಲಿನಲ್ಲಿ ವಾಸ ಮಾಡುತ್ತಿದ್ದ. ಕುಂದಾಪುರ ತಾಲ್ಲೂಕಿನಾದ್ಯಂತ ಬಂಡ ಸಮಾಜದ ಭೂಮಾಲಿಕರು ಪ್ರಭಲರಾಗಿದ್ದಂತೆ ಆ ಗ್ರಾಮದಲ್ಲೂ ಅವರದೇ ಪ್ರಭಾವ, ಭೂಮಾಲಕರ ಪ್ರಭಾವ ಎಂದರೆ "ದಬ್ಬಾಳಿಕೆ ಮತ್ತು ಶೋಷಣೆ". ಎಲ್ಲಾ ಬಡ ವಿಭಾಗಗಳ ಜನತೆಯ ಮೇಲೆ ಅದರಲ್ಲೂ ಕೃಷಿ ಕೂಲಿಗಾರರ ಮೇಲೆ, ಅಂದರೆ ಗೋಪಾಲನಂತಹವರ ಜೀವನದ ಮೇಲೆ ಅವರ ಕ್ರೂರ ಹಿಡಿತ.

ಹೀಗಿರುವಾಗ ಆ ಗ್ರಾಮದಿಂದ ಕುಂದಾಪುರದ ಹೆಂಚಿನಕಾರ್ಖಾನೆಗಳಲ್ಲಿ ಕೆಲಸ ಮಾಡಲು ಹೋಗುತ್ತಿದ್ದ ಕೆಲವು ಕೆಲಸಗಾರರ ಸಂಪರ್ಕ ಅಪ್ಪಿ ತಪ್ಪಿ ಗೋಪಾಲನಿಗಾಯಿತು. ಹೆಂಚಿನ ಕಾರ್ಖಾನೆಗಳ ಕಾರ್ಮಿಕರು ಗುಂಪು–ಗುಂಪಾಗಿ ಕೆಲವು ಧ್ವಜ ಹಿಡಿದು ಕೈಯಲ್ಲಿ ಹುಂಡಿ ಪಾತ್ರೆಗಳನ್ನು ಹಿಡಿದು ಗೋಪಾಲನ ಗ್ರಾಮದಲ್ಲಿ ಮುಷ್ಕರದಲ್ಲಿ ನಿರತರಾದ ಕಾರ್ಮಿಕರಿಗೆ ಸಹಾಯ ಕೇಳುತ್ತಾ ಬಂದಾಗ ಈ ಸಂಪರ್ಕ ಬಂದಿರಬಹುದು, ಅಥವಾ ಕುಂದಾಪುರ ಪೇಟೆಯಲ್ಲಿ ಸಾವಿರಾರು ಹೆಂಚಿನ ಕಾರ್ಮಿಕರು ಮೆರವಣಿಗೆ ತೆಗೆದಾಗ ಗೋಪಾಲನು ಆ ದೃಶ್ಯವನ್ನು ಕಂಡಿರಬೇಕು. ಮುಖ್ಯವಾಗಿ ಕಾರ್ಮಿಕ ವರ್ಗದ ಪಕ್ಷದ ಕೆಲವರು ರೈತ ಸಂಘವನ್ನು ಗ್ರಾಮಾಂತರಗಳಲ್ಲಿ ಕಟ್ಟಲು ಹೊರಟಾಗ.

ಗೋಪಾಲ ಮತ್ತಿತರ ಕೃಷಿ ಕೂಲಿಗಾರರು, ಕೆಲವು ರೈತರು ಗುಪ್ತವಾಗಿ ಅಷ್ಟೂ ಹೆದರಿಕೆ ಅವರಿಗೆ–ಸೇರಿ ರೈತರ ಗ್ರಾಮ ಸಮಿತಿ ಕಟ್ಟಿದರು. ರಾತ್ರಿಯಲ್ಲಿ ಹಲವಾರು ತಮ್ಮಂತಹವರ ಮನೆ ಮನೆಗೆ ಹೋಗಿ ಗ್ರಾಮದಲ್ಲಿ ರೈತರು, ಕೃಷಿ ಕೂಲಿಗಾರರು ಒಗ್ಗಟ್ಟಾಗಬೇಕೆಂದು ಪ್ರಚಾರ ಮಾಡಿದರು, ಸದಸ್ಯತ್ವವನ್ನು ನೊಂದಾಯಿಸಿದರು. ಒಂದು ದಿನ ಕುಂದಾಪುರದಲ್ಲಿ ಅಬ್ರಾಹಂ ಕರ್ಕಡ, ಬಿ. ನಾರಾಯಣ ಮೊದಲಾದ ಕಾರ್ಮಿಕ ಮುಂದಾಳುಗಳನ್ನು ಕರೆದು ತಂದು ಮೊಟ್ಟ ಮೊದಲಿನ ಸಾರ್ವಜನಿಕ ಸಭೆ ಕೆಂಬಾವುಟದಡಿಯಲ್ಲಿ ಆನಗಲ್‌ನಲ್ಲಿ ನಡೆಯಿತು.

ಸ್ವಲ್ಪ ಸಮಯದಲ್ಲಿ ಗ್ರಾಮದ ಮತ್ತು ಆಸುಪಾಸಿನ ಕೃಷಿ ಕೂಲಿಗಾರರು ಕೂಲಿ ಹೆಚ್ಚಳಕ್ಕಾಗಿ ಬೇಡಿಕೆಯನ್ನಿಟ್ಟರು. ಕೃಷಿ ಕೆಲಸದ ಕಾಲದಲ್ಲಿ ಕೆಲಸ ನಿಲ್ಲಿಸಿದರು. ಸ್ವಲ್ಪ ಸಮಯದಲ್ಲಿ ಅವರ ಕೂಲಿ–ಕಾಳಿನಲ್ಲಿ–ಅಧಿಕವಾಯಿತು. ರೈತ ಸಂಘದ ಕುರಿತು ಪ್ರಚಾರ ಹೆಚ್ಚಿತು. "ತಮ್ಮ ಬೇಡಿಕೆಯನ್ನು ಪಡೆಯಲು ಈ ಸಂಘವು ನಮಗೆ ಸಹಾಯ ಮಾಡುವುದು" ಎಂಬ ಭಾವನೆ ಗ್ರಾಮಾಂತರದ ಬಡ ಜನವಿಭಾಗಗಳಲ್ಲಿ ಅದರಲ್ಲೂ ಹರಿಜನ ಕೃಷಿ ಕೂಲಿಗಾರರಲ್ಲಿ ಬೆಳೆಯಲು ಶುರುವಾಯಿತು.

ಇದನ್ನು ಕಂಡ ಸ್ಥಳೀಯ ಭೂಮಾಲಿಕರಿಗೆಕೆಂಡದಂತೆ ಕೋಪ ಬಂತು. ಕೆಂಪು ಬಾವುಟದ ಪ್ರಭಾವ ಕುಂದಾಪುರದ ಪೇಟೆಯಲ್ಲಿ, ಕಾರ್ಖಾನೆಗಳಲ್ಲಿ, ಪ್ರಭಲ ಹೆಂಚು ಕಾರ್ಖಾನೆಗಳ ಲಕ್ಷಾಧಿಪತಿಗಳಾದ ಒಡೆಯರನ್ನು ತಮ್ಮ ಒಗ್ಗಟ್ಟಿನ ಬಲದಿಂದ ಹದ್ದುಬಸ್ತಿಗೆ ಕಾರ್ಮಿಕರು ಹೇಗೆ ತಂದಿಟ್ಟರು ಎಂಬ ಕತೆ – ಕತೆಯಲ್ಲ ಯತಾರ್ಥ ಸಂಗತಿ – ಈ ಭೂಮಾಲಿಕರಿಗೆ ತಿಳಿದಿತ್ತು. ಅವರ ನೆಂಟರು, ಬಂಧುಗಳು ಮಿತ್ರರು ಹೆಂಚಿನ ಕಾರ್ಖಾನೆಯ ಮಾಲಿಕರಲ್ಲಿ ಇರುವುದು ಖಂಡಿತ.

ಈ ಭೂ ಮಾಲಕರು, ಆದಕಾರಣ ಬೆಗೂರಿನಲ್ಲಿ ಗ್ರಾಮಾಂತರಗಳಲ್ಲಿ ರೈತ ಸಂಘವು ಕೆಂಪು ಬಾವುಟನಡಿಯಲ್ಲಿ ಹರಡುವ ಮೊದಲೇ ಚಿವುಟಿ ಬಿಡಲು ಹಂಚಿಕೆ ಹೂಡಿದರು. ಮೊದಲಿನ ಚೆಂಡು ಹಾರಿಸಿದರು, ಒಂದು ದಿನ ಏಕಾಏಕಿ ಗೋಪಾಲನನ್ನು ಪೋಲಿಸರು ಸೆರೆ ಹಿಡಿದು, ಪೋಲಿಸು ಸ್ಟೇಷಕನಿಗೆ ಒಯ್ದು (ಕುಂದಾಪುರ ಪೇಟೆಯಲ್ಲಿ) ಚೆನ್ನಾಗಿ ಥಳಿಸಿದರು. ಎರಡು ರಾತ್ರಿ ಎರಡು ಹಗಲು ಲಾಕಪ್‌ನಲ್ಲಿ ಇರಿಸಿದರು. ಒಂದು ದಿನ ಎಲ್ಲಿದ್ದಾನೆಂದು ಯಾರಿಗೂ ಗೊತ್ತಾಗಲಿಲ್ಲ. ಗುಸು ಗುಸು ಸುದ್ದಿ ಹರಡಿತು. ಕೊನೆಗೆ ತಿಳಿಯಿತು. ಗೋಪಾಲ ಪೋಲಿಸ್ ಸ್ಟೇಶನಿನಲ್ಲಿದ್ದಾನೆಂದು ತಿಳಿಯಿತು, ಗೊತ್ತಾದ ಕೂಡಲೇ ಅಬ್ರಾಹಂ ಕರ್ಕಡರು ಪೋಲೀಸ್ ಸ್ಟೇಶನ್ನಿಗೆ ಹೋದರು, ಯಾಕೆ ಗೋಪಾಲನನ್ನು ದಸ್ತಗಿರಿ ಮಾಡಿದುದು ಎಂದು ಸಬ್ ಇನ್ಸ್‌ಪೆಕ್ಟರನ್ನು ಅವರು ಕೇಳಿದಾಗ ದರ್ಪದಿಂದ ಉತ್ತರ ಕೊಟ್ಟರು, ನಿವ್ಯಾರು, ಕೇಳಲಿಕ್ಕೆ ಎಂದು. ಸ್ವಲ್ಪ ಸಮಯದ ನಂತರ ವಾಗ್ವಾದ ನಡೆದಾಗ ಗೋಪಾಲನ ಮೇಲೆ ಪಿರ್ಯಾದಿಯನ್ನೂ ಆ ಪಿರ್ಯಾದೆಯನ್ನು ಅವನ ಗ್ರಾಮದ ಒಬ್ಬ ಪ್ರಸಿದ್ಧ ಭೂ ಮಾಲಿಕನು ಕೊಟ್ಟಿದ್ದನೆಂದೂ, ಆ ಪಿರ್ಯಾದೆಯ ಪ್ರಕಾರ ಗೋಪಾಲ ಒಂದು ಕೊಡಪಾನ (ಪಾತ್ರೆಯನ್ನು) ಕದ್ದಿದ್ದಾನೆಂದೂ ತಿಳಿದು ಬಂತು. ಅಬ್ರಾಹಂ ಕರ್ಕಡರಿಗೆ ಸಿಟ್ಟು ಬಂತು. ಅವರು ಸಾವಿರಾರು ಕಾರ್ಮಿಕರನ್ನು ಸಂಘಟಿಸಿ ಹೋರಾಟ ಮಾಡಿದವರು ತಾನೆ! ಸಬ್ ಇನ್ಸ್‌ಪೆಕ್ಟರರ ಈ ಮಾತುಗಳನ್ನು ಕೇಳಿ ಅವರು ಸಿಡಿಮಿಡಿಗೊಂಡರು.

ಆದರೆ ಏನು ಮಾಡಬಲ್ಲರು. ಜಾಮಿನಾನುಕೊಟ್ಟು ಗೋಪಾಲನನ್ನು ಬಿಡಿಸಿದರು. ಕೇಸು ಮಾಡಿದರೆ "ನಾವು ನಿನ್ನನ್ನು ವಕಾಲತ್ತುಕೊಟ್ಟು ರಕ್ಷಿಸುವೆವು" ಎಂದು ಆಶ್ವಾಸನೆ ಕೊಟ್ಟರು. ಗೋಪಾಲ ತನ್ನ ಊರಿಗೆ ಹೋದ, ತನ್ನ ಎಲ್ಲಾ 'ನಡೆದಕಥೆ' (ಪೆಟ್ಟು, ಆಪಾದನೆ, ಇತ್ಯಾದಿ) ಯನ್ನು ಏನಾಯಿತೆಂದು ಎಲ್ಲರಿಗೂ ತಿಳಿಯ ಹೇಳಿದ. ಇಡೀ ಗ್ರಾಮದ ರೈತ ಕಾರ್ಮಿಕರು--ಬಡಜನರು ಉದ್ರಿಕ್ತರಾದರು. ಭೂಮಾಲಿಕರ ಮೇಲೂ (ಅದರಲ್ಲೂ ಸುಳ್ಳು ಪಿರ್ಯಾದು ಕೊಟ್ಟ ಭೂಮಾಲೀಕರ ಮೇಲೆ) ಪೋಲಿಸರ ಮೇಲೂ ಮುಖ್ಯವಾಗಿ ಭ್ರಷ್ಟ ಸಬ್‌ಇನ್ಸ್‌ಪೆಕ್ಟರರ ಮೇಲೆ ಸಿಡಿದೆದ್ದರು. ಹಲವು ದಿನಗಳಲ್ಲಿ ಅಚೆಂದೀಚೆಗೆ, ಈಚೆಯಿಂದಾಚೆಗೆ ರೈತ ಸಂಘ--ಕಾರ್ಮಿಕ ಸಂಘದ ಸಂಘಟಕರು, ಗೋಪಾಲನೂ ಅವನ ಗ್ರಾಮದ ಸಂಗಡಿಗರೂ ಓಡಾಡಿದರು, ಹಲವು ಗ್ರಾಮಗಳಲ್ಲಿ ಸುತ್ತಾಡಿದರು. ಪ್ರತಿಫಲವಾಗಿ "ಹಲವು ಗ್ರಾಮಗಳಿಂದ ರೈತರೂ, ಕೃಷಿಕಾರ್ಮಿಕರು, ಪೇಟೆಯಿಂದ ಬಂದ ಕಾರ್ಮಿಕರ ಮೆರವಣಿಗೆಯಲ್ಲಿ ಬಂದ ಕಾರ್ಮಿಕರೂ ಸೇರಿ ಸಾಕಷ್ಟು ಬಲವಾದ ಸಾರ್ವಜನಿಕ ಸಭೆ" ನಡೆಸಲಾಯಿತು. ಭೂಮಾಲಿಕರಿಗೂ, ಪೋಲಿಸ್ ಸಬ್‌ಇನ್ಸ್‌ಪೆಕ್ಟರರಿಗೂ ದಿಕ್ಕಾರ ಹಾಕಲಾಯಿತು.

ಆಗ ಎರಡನೇ ಚೆಂಡನ್ನು ಆಡಿದರು ಭೂಮಾಲಿಕರು. "ನಮಗೆ ಭಯವಾಗುತ್ತೆ, ಜೀವ ಭಯವಾಗುತ್ತದೆ, ಕಮ್ಯೂನಿಸ್ಟರು ನಮ್ಮ ಗ್ರಾಮದಲ್ಲಿ ನಸುಳಿದ್ದಾರೆ. ನಮಗೆ ರಕ್ಷಣೆ ಬೇಕು" ಎಂದು ಪೋಲಿಸರಿಗೆ ಈ ಭೂಮಾಲಿಕರಿಂದ ಸಾಮೂಹಿಕ ಸಹಿವುಳ್ಳ ಮನವಿ ಹೋಯಿತು.

ತೆಗೆದುಕೋ, ಒಂದು ದಿನ ರಾತ್ರಿ 12 ಗಂಟೆಗೆ ಮೂರು ನಾಲ್ಕು ಪೋಲೀಸು ವ್ಯಾನುಗಳು ಆ ಗ್ರಾಮದ ಸಮೀಪಕ್ಕೆ ಬಂದವು. ರಾತ್ರಿ 12 ಗಂಟೆಯಿಂದ ಹಿಡಿದು ಬೆಳಿಗ್ಗೆ 5 ಗಂಟೆಯವರೆಗೆ 'ಪೋಲಿಸರು ನರಬೇಟೆ' ಯಾಡಿದರು. ಮನೆ ಮನೆಗೆ, ಬಡರೈತ ಕೃಷಿ ಕಾರ್ಮಿಕರ ಮತ್ತು ಕಾರ್ಖಾನೆಗಳ ಕಾರ್ಮಿಕರ ಮನೆಗಳಿಗೆ–ಹೋಗಿ ಬಾಗಿಲು ಮುರಿದು ಇದ್ದಾನೇನೂ ನಾರಾಯಣ ಇದ್ದಾನೋ ನಕ್ಕುರ, ಇದ್ದಾನೋ ರಾಮು ಎಂದು ಹೆಸರಿನಿಂದ ಕೂಗಿದರು. ಕೆಲವು ಮನೆಗಳಲ್ಲಿ ಯಾರೂ ಓಗೊಡದಿದ್ದವರೆ ಬಾಗಿಲು ಬಡೆದು, ಒಳಗಡೆಯಿದ್ದ ಹೆಣ್ಣು ಮಕ್ಕಳು, ಮುದುಕರು ಎಂಬ ಭೇದವಿಲ್ಲದೆ ಚೆನ್ನಾಗಿ ಲಾಠಿಯಿಂದ ಥಳಿಸಿ, ಅಲ್ಲಿದ್ದ ಯುವಕರನ್ನು ದಸ್ತಗಿರಿ ಮಾಡಿ, ವ್ಯಾನ್‌ನಲ್ಲಿ ತುಂಬಿಸಿದರು. ಬೆಳಿಗ್ಗೆ ನೋಡಿದಾಗ ವ್ಯಾನಿನಲ್ಲಿ 30--40 ಮಂದಿಯ ಬಂಧನ. ಗ್ರಾಮದಲ್ಲಿ ಸ್ಮಶಾನ ವಾತಾವರಣ.

ಸ್ವಲ್ಪ ಸಮಯ ಯಾರೂ ಏನೂ ಹೇಳಲೊಲ್ಲರು. ಎಲ್ಲರಿಗೂ ಭಯ. ಆದರೆ ಸುದ್ದಿ ಹರಡದೆ ಇರುತ್ತದೆಯೆ? ಮೆಲ್ಲನೆ ಪೋಲಿಸ್‌ಸ್ಟೇಶನಲ್ಲಿ "ತುಂಬಾ ಬಡಪಾಯಿ ರೈತರನ್ನು ಕೂಡಿಸಿ ಹೊಡೆಯುತ್ತಿದ್ದಾರೆ ಎಂದು ಸುದ್ದಿ ಹರಡಿತು. ಕಾರ್ಖಾನೆಗಳಲ್ಲಿ ಗುಜುಗುಜು ಮಾತು ಶುರುವಾಯಿತು. ಕುಂದಾಪುರದ ಹೆಂಚಿನ ಕಾರ್ಮಿಕರ ಆಫೀಸಿಗೆ ಸಂಜೆಯಾಗುವಾಗ ನೂರಾರು ಜನರು ಒಬ್ಬರ ನಂತರ ಒಬ್ಬರು ಬಂದರು. ಸುದ್ಧಿ ಹೇಳಿದರು.

ಮೂರನೇ ದಿನವೂ ಬಂಧಿತರ ಬಿಡುಗಡೆಯಾಗಲಿಲ್ಲ. ಕಮ್ಯೂನಿಸ್ಟ ಮುಂದಾಳುಗಳು ಹೇಳಿದರು. ಕಾನೂನು ಪ್ರಕಾರ 24 ಗಂಟೆಗಳಲ್ಲಿ ಪೋಲಿಸರು ಬಂಧಿತರನ್ನು ಬಿಟ್ಟುಬಿಡಬೇಕು, ಅಥವಾ ಕೋರ್ಟಿಗೆ ಹಾಜರು ಪಡಿಸಬೇಕು ಎಂದರು.

ಆದರೆ ಅದು ಕಾನೂನು ಹೌದು, ಬಡರೈತರಿಗೆ ಕಾನೂನು ಎಲ್ಲಿ? ಭೂಮಾಲಿಕರ ನಿರ್ದೇಶನದ ಪ್ರಕಾರ "ದಸ್ತಗಿರಿ" ನಡೆದಿದ್ದಲ್ಲವೆ? ಆದರೆ ಅವರ ಆಶೆ ಈಡೇರಬೇಡವೆ, ಆದ್ದರಿಂದ ಹೊಡೆತ, ರಕ್ತ ಬರುವವರೆಗೆ ಹೊಡೆತ,ದಿನ ಎರಡಾದರೂ ಬಿಡುಗಡೆ ಇಲ್ಲ.

ಗ್ರಾಮಗಳಲ್ಲಿ ಹಾಹಾಕಾರ ಎದ್ದಿತು.

ಏನು ಮಾಡುವುದು, ಏನು ಮಾಡುವುದು ಎಂದು ಸಾಮಾನ್ಯ ಜನರು ಮಾತನಾಡುತ್ತಿದ್ದರು. ದೊಡ್ಡ ಶ್ರೀಮಂತ ಭೂಮಾಲಿಕರು ಅಲ್ಲಲ್ಲಿ ಸೇರಿ "ಬುದ್ಧಿ ಕಲಿಸಬೇಕು ಕಮ್ಯೂನಿಸ್ಟರಿಗೆ" ಎಂದು ಬೊಬ್ಬಿಟ್ಟರು.

ಎರಡನೆ ದಿನ ರಾತ್ರಿಯೂ ಬೇಟೆ ನಡೆದು ಗ್ರಾಮಸ್ಥರನ್ನು ದಸ್ತಗಿರಿ ಮಾಡಲಾಯಿತು. ಬಿಡುಗಡೆ ಮಾಡುತ್ತಿರಲಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಉಪನ್ಯಾಸಕರು, ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿಯೂ ಆಗಿ (ಅಲ್ಲಿಗೆ) ಕುಂದಾಪುರಕ್ಕೆ ಹೋದೆ. ಅಲ್ಲಿನ ಕಾರ್ಮಿಕ–ರೈತ ಮುಖಂಡರ ಜೊತೆ ಸೇರಿ ಆಲೋಚನೆ ಮಾಡಿದೆ.

ರೈತರ ಬಿಡುಗಡೆಗೆ–ಜಮೀನುದಾರರ ಪಿತೂರಿಯನ್ನು ಸೋಲಿಸುವುದಕ್ಕೆ ಯೋಜನೆ ಹಾಕಿದರು.

ಮೂರನೇ ದಿನ ನೂರಾರು ಕಾರ್ಯಕರ್ತರನ್ನು ರಾತ್ರೋರಾತ್ರಿ ಎಲ್ಲೆಡೆಗೆ ಓಡಿಸಿ "ಹೆಂಚಿನ ಕಾರ್ಮಿಕರ ಸಾರ್ವತ್ರಿಕ ಮುಷ್ಕರ"ಕ್ಕೆ ಕರೆ ಕೊಡಲಾಯಿತು. ರೈತರನ್ನು ಕುಂದಾಪುರಕ್ಕೆ ಬರಹೇಳಲಾಯಿತು. ಸಾವಿರಾರು ಮಂದಿ ರೈತ--ಕಾರ್ಮಿಕರ ನೇತೃತ್ವದಲ್ಲಿ ಕೆಂಪು ಧ್ವಜ ಹಿಡಿದು ಪೋಲಿಸರು ಎದುರುಗಡೆ (ಅಲ್ಲೇ ಎದುರುಗಡೆ ಮಾರ್ಗದ ಇನ್ನೊಂದು ಬದಿಯಲ್ಲಿ ಮ್ಯಾಜಿಸ್ಟ್ರೇಟ್‌ರ ಕೋರ್ಟ್ ಇತ್ತು) ಘೇರಾವ್ ಮಾಡಿದರು. ನಾನು ಈ ಜನ ಸಮುದಾಯಕ್ಕೆ ಘೋಷಿಸಿ ಹೇಳಿದೆ. "ಲಾಕಪ್ಪಿನಿಂದ ರೈತರರನ್ನು ಬಿಡುಗಡೆಮಾಡಿ, ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹಾಜರುಪಡಿಸುವ ತನಕ ಯಾರೂ ಏಳಬಾರದು. ಪೋಲಿಸರು ಬೇಕಾದರೆ ನಮ್ಮನ್ನೆಲ್ಲ ಹೊಡೆದು--ಬಡಿದು ಹಾಕಲಿ. ನಾವು ಇಲ್ಲಿಂದ

(6ನೇ ಪುಟ ನೋಡಿ)

ಕರ್ನಾಟಕದ ಗ್ರಾಮಗಳು

ಕರ್ನಾಟಕದಲ್ಲಿ ಒಟ್ಟು 27,028 ಹಳ್ಳಿಗಳಿವೆ, ನಮ್ಮ ಸಂಘಟನೆ ಪ್ರತಿ ಹಳ್ಳಿಗೆ ಹಬ್ಬ ಬೇಕು ಎಂದ ಮೇಲೆ ಈ ಹಳ್ಳಿಗಳ ಸ್ವರೂಪವೇನು? ಬೇರೆ ಬೇರೆ ಜಿಲ್ಲೆಯಲ್ಲಿನ ಹಳ್ಳಿಗಳೆಷ್ಟು?

ಅದರಲ್ಲಿ ಪ್ರಮುಖವಾದ ಹಳ್ಳಿಗಳೆಷ್ಟು ಎಂಬುದನ್ನು ತಿಳಿಯ ಬೇಡವೆ? ವಿವಿಧ ಪ್ರದೇಶಗಳಲ್ಲಿ ಹಳ್ಳಿಗಳ ಸ್ವರೂಪವೇನು? 500 ಕ್ಕಿಂತ ಕಡಿಮೆ ಜನ ಸಂಖ್ಯೆಯಿರುವ ಹಳ್ಳಿಗಳೇ ಅರ್ಧಕ್ಕಿಂತ ಹೆಚ್ಚು ದಕ್ಷಿಣ ಕರ್ನಾಟಕದಲ್ಲಿ ಸಣ್ಣ ಸಣ್ಣ ಊರುಗಳು, ಕೇವಲ ½ ಕಿ. ಮಿ. ನಿಂದ 2 ಕಿ. ಮೀ. ಅಂತರದಲ್ಲಿಯೇ ಇರುತ್ತವೆ. ಆದರೆ ಉತ್ತರ ಕರ್ನಾಟಕದಲ್ಲಿ ಇದಕ್ಕೆ ವಿರುದ್ಧವಾದ ಪರಿಸ್ಥಿತಿ. ಇದು ಇಲ್ಲಿಯ ಭೂಸಂಬಂಧಗಳನ್ನು ಹೊಂದಿಕೊಂಡಿದೆ ಎಂಬುದನ್ನು ಮರೆಯಬಾರದು. ಕರಾವಳಿಯಲ್ಲಿ ಊರುಗಳು ಎಂಬ ಕೇಂದ್ರ ಸ್ಥಾನವೇ ಇಲ್ಲದೆ ಉದ್ದಕ್ಕೂ ಮನೆಗಳು, ಹೊಲಗಳು, ತೋಟಗಳು ಹಂಚಿ ಹೋಗಿರುವುದೂ ಉಂಟು. ಇನ್ನು ಮಲೆನಾಡಿನ ಗುಡ್ಡ ಬೆಟ್ಟಗಳಲ್ಲಿ ಅರಣ್ಯದ ಮಧ್ಯೆ ಹಂಚಿ ಹೋದ ಹಳ್ಳಿಗಳು ಕವಿ ಕುವೆಂಪು ರವರೆಂದಂತೆ "ಊರೆಂದರೊಂದೆಮನೆ". ಒಂದೆಮನೆಯೆಂದರೆ ಅಲ್ಲಿ ವಾಸಿಸುವುದು ಒಂದೇ ಕುಟುಂಬವೆಂದಲ್ಲ. ಒಂದು ಭೂಮಾಲೀಕ ಕುಟುಂಬದ "ಮನೆಯ" ಸುತ್ತ ಹತ್ತಾರು ಜೀತದಾಳುಗಳ, ಹಳೆಪೈಕದವರ ಒಟ್ಟಿನಲ್ಲಿ ಕೃಷಿ ಕಾರ್ಮಿಕರ ಗುಡಿಸಲುಗಳು. ಈ ಗುಂಪೇ ಒಂದು ಹಳ್ಳಿ.

ಈ ರೀತಿ ವಿಂಗಡಣೆಯಾದ ಹಳ್ಳಿಗಳಲ್ಲಿ ಭೂಸಂಬಂಧಗಳು ಅಲ್ಲಿಯದೇ ಆದ ಒಂದು ವಿಶಿಷ್ಟ ಸಾಮಾಜಿಕ ಸಂಬಂಧಗಳನ್ನು ಸೃಷ್ಟಿಸಿರುತ್ತವೆ. ಮತ್ತು ಹಳ್ಳಿ ಹಳ್ಳಿಗಳ ನಡುವಣ ಸಂಬಂಧವೂ ಇದರಿಂದ ಪ್ರಭಾವಿತವಾಗುತ್ತವೆ. ಒಂದು ಸಂಪರ್ಕ ಕೇಂದ್ರದ ಸುತ್ತ 5 – 6 ಹಳ್ಳಿಗಳ ಒಂದು ಹಳ್ಳಿಗಳ ಗುಂಪು ರೂಪುಗೊಳ್ಳುತ್ತದೆ.

ರೈತ ಸಂಘಟನೆಯ ಬೆಳವಣಿಗೆ ಬೇರೆ ಬೇರೆ ಪ್ರದೇಶಗಳ ಬೇರೆ ಬೇರೆ ಪರಿಸ್ಥಿತಿಗೆ ಹೊಂದಿಕೊಂಡು ರೂಪಿಸಿದ ಕಾರ್ಯತಂತ್ರವಾಗಬೇಕು. ಪ್ರಜ್ಞಾಪೂರ್ವಕವಾಗಿ ಹೀಗೆ ಆಲೋಚಿಸಿದಾಗ ರೈತ ಸಂಘದ ಬೆಳವಣಿಗೆಗೆ ಒಂದು ನಿರ್ದಿಷ್ಟ ಯೋಜನೆ ರೂಪುಗೊಳ್ಳುತ್ತದೆ. ಇನ್ನು ವಿವಿಧ ಜಿಲ್ಲೆಗಳ ಹಳ್ಳಿಗಳ ಸಂಖ್ಯೆಯನ್ನು ನೋಡೋಣ.

ಜಿಲ್ಲೆ	ಒಟ್ಟು ಗ್ರಾಮಗಳು	ಜನ ಸಂಖ್ಯೆವಾರು ವಿಂಗಡಣೆ: 200ಕ್ಕಿಂತ ಕಡಿಮೆ	200–500	500–1000	1000–2000	2000–5000	5000–10,000	10,000 ಕ್ಕೂ ಹೆಚ್ಚು
ಕರ್ನಾಟಕ	27028	4112	7177	7342	5239	2772	401	35
I ದಕ್ಷಿಣದ ಬಯಲುನಾಡು								
1. ಬೆಂಗಳೂರು	2425	404	744	745	421	96	15	—
2. ಕೋಲಾರ	2848	622	1181	753	228	60	6	—
3. ತುಮಕೂರು	2507	449	831	733	376	112	4	—
4. ಮಂಡ್ಯ	1354	204	402	361	256	117	14	—
5. ಮೈಸೂರು	1641	227	294	461	392	239	27	1
6. ಹಾಸನ	2371	629	913	596	197	34	1	1
II ಉತ್ತರದ ಬಯಲುನಾಡು								
7. ಬೆಳಗಾಂ	1142	54	141	245	330	266	92	14
8. ಧಾರವಾಢ	1322	60	208	371	412	220	49	2
9. ಬಿಜಾಪುರ	1244	49	194	343	392	240	32	4
10. ಗುಲ್ಬರ್ಗಾ	1305	55	231	463	349	184	23	—
11. ಬೀದರ	598	18	80	188	195	103	13	1
12. ರಾಯಚೂರು	1401	129	369	453	308	112	27	3
13. ಬಳ್ಳಾರಿ	590	31	67	112	195	166	19	—
14. ಚಿತ್ರದುರ್ಗ	1266	138	254	392	330	147	9	2
III ಕರಾವಳಿ ಹಾಗು ಮಲೆನಾಡು								
15. ದಕ್ಷಿಣ ಕನ್ನಡ	635	—	1	37	190	350	52	5
16. ಉತ್ತರ ಕನ್ನಡ	1283	425	412	248	114	73	9	2
17. ಶಿವಮೊಗ್ಗ	1795	413	550	466	258	102	6	—
18. ಚಿಕ್ಕಮಗಳೂರು	1013	202	276	288	188	57	2	—
19. ಕೊಡಗು	288	9	29	87	108	54	1	—

ಸರ್ಕಾರಿ ನೌಕರಿ ಹಾಗೂ ವಿವಿಧ ತಾಂತ್ರಿಕ ವಿದ್ಯಾಭ್ಯಾಸಗಳಲ್ಲಿ ಜಾತಿವಾರು ಪ್ರಾತಿನಿಧ್ಯ.

ಜಾತಿಗಳು	ಜನ ಸಂಖ್ಯೆ ಪ್ರಮಾಣ	ಸರ್ಕಾರಿ ನೌಕರಿ: ಒಂದನೇ ದರ್ಜೆಯಿಂದ ಮೂರನೆ ದರ್ಜೆವರೆಗೆ	ಕೆ. ಎ. ಎಸ್.	ಐ. ಎ. ಎಸ್.	ವಿದ್ಯಾಭ್ಯಾಸ: ಇಂಜನಿಯರಿಂಗ್	ವೈದ್ಯಕೀಯ	ಕೃಷಿ	ಪಾಲಿಟೆಕ್ನಿಕ್
ಬ್ರಾಹ್ಮಣರು	3.81	15.54	13.13	25.88	20.09	5.86	19.72	15.08
ಲಿಂಗಾಯಿತರು	16 92	19 68	14.15	19.41	14.91	6.72	20.19	15.08
ಒಕ್ಕಲಿಗರು	11.68	11.74	19.19	7.64	13.45	14.23	16.14	8.60
ಮುಸಲ್ಮಾನರು	10.97	9.45	8.08	3 52	8.52	9.92	—	9.83
ಹರಿಜನರು	15.56	8.53	13.13	14.70	6.96	11.36	15.31	8.65
ಗಿರಿಜನರು	2.82	2.75	3.03	1.76	1.12	2.28	3 94	1.38
ಕ್ರಿಶ್ಚಿಯನ್ನರು	1.89	3.98	2.02	1.76	3.35	7.90	2.55	2.83
ವೈಶ್ಯ	0.77	1.34	1.01	1.76	2.14	3.52	—	1.28
ವಿಶ್ವಕರ್ಮ	1.96	2.24	3.03	—	—	—	—	1.61
ಕುರುಬರು	6.92	2.81	5.05	—	1.47	2.28	—	1.59
ಈಡಿಗರು	2.54	1.18	—	1.17	—	2.21	2.78	1.76
ಬೆಸ್ತರು	2.80	1.79	2.02	—	—	—	1.39	—
ಬೇಡರು	2.75	1.11	—	—	—	1.37	—	1.63
ಬಲಿಜ	1.33	1.50	1.01	2.9	1.98	1.63	1.39	1.63
ಕೊಡಗರು	0.23	1.56	2.02	—	—	—	1.16	—

ಅಳಪೆ ಪ್ರದೇಶ ಬೀಡಿ ಕಾರ್ಮಿಕರ ಸಭೆ

ಅಳಪೆ ಬೀಡಿ ಲೇಬರ್ ಯೂನಿಯನ್ನಿನ 13ನೇ ವಾರ್ಷಿಕ ಮಹಾಸಭೆಯು ತಾ|| 31-8-86 ರಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಪೂವಪ್ಪ ಸಾಲಿಯಾನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಕೆ. ಶ್ರೀಧರ್‌ರವರು ಸಭಿಕರನ್ನು ಸ್ವಾಗತಿಸಿದರು, ಗತ ವರ್ಷದ ಸಂಘದ ಚಟುವಟಿಕೆಯ ವರದಿ ಮತ್ತು ಲೆಕ್ಕ ಪತ್ರವನ್ನು ಸಭೆಯಲ್ಲಿ ಮಂಡಿಸಲಾಯಿತು.

ಮಹಾಸಭೆಗೆ ಶುಭಕೋರಿ ಸಿ. ಐ. ಟಿ. ಯು. ಮುಂದಾಳುಗಳಾದ ಕಾ|| ಕಮಲಾಕ್ಷ ಬಂಗೇರ, ಜಿ. ವೀರಪ್ಪ ಮತ್ತು ಮಹಾನಗರ ಪಾಲಿಕೆಯ ಕಾರ್ಪೊರೇಟರ್ ಜೆ. ಸದಾಶಿವ ಶೆಟ್ಟಿಯವರು ಮಾತನಾಡಿದರು.

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನಿನ ಕಾರ್ಯದರ್ಶಿ ಯು. ಬಿ. ಲೋಕಯ್ಯನವರು ಕೇಂದ್ರ ಸರಕಾರ ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಿಂದ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಮನೆ ಕಟ್ಟಲು ಸಹಾಯ, ಔಷಧಿ ಸೌಲಭ್ಯ ಎಲ್ಲರಿಗೂ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿದರು. ಮುಂದಿನ ವರ್ಷಕ್ಕೆ ಸಂಘದ ಅಧ್ಯಕ್ಷರಾಗಿ ಕೆ. ಪೂವಪ್ಪ ಸಾಲಿಯಾನ್, ಉಪಾಧ್ಯಕ್ಷರುಗಳಾಗಿ ಯು. ತಿಮ್ಮಪ್ಪ ಶ್ರೀಮತಿ ಸುಶೀಲ, ಕಾರ್ಯದರ್ಶಿಯಾಗಿ ಜೆ. ಬಾಲಕೃಷ್ಣ ಶೆಟ್ಟಿ, ಜೊತೆ ಕಾರ್ಯದರ್ಶಿಯಾಗಿ ಜೆ. ಸಂಜೀವ, ಹರಿಚಂದ್ರನಾಯ್ಕ ಮತ್ತು ಶ್ರೀಮತಿ ಹೇಮಾವತಿ ಕೋಶಾಧಿಕಾರಿ ಕೆ. ಶ್ರೀಧರ್‌ರವರಿರುವ ಆಡಳಿತ ಮಂಡಳಿ ಹಾಗೂ 22 ಮಂದಿಯುಳ್ಳ ಕಾರ್ಯಕಾರಿ ಸಮಿತಿಯನ್ನು ಮಹಾಸಭೆಯು ಸರ್ವಾನುಮತದಿಂದ ಆರಿಸಿತು.

ಮಹಾಸಭೆಯು ರಾಜ್ಯ ಸರ್ಕಾರ ಬೀಡಿ ಕಾರ್ಮಿಕರಿಗೆ ಪ್ರಕಟಿಸಿದ ಕನಿಷ್ಟ ಮಜೂರಿಯನ್ನು ಸರ್ವಾನುಮತದಿಂದ ಖಂಡಿಸಿತು. ಜೆ. ಸಂಜೀವನವರು ಧನ್ಯವಾದ ಕೊಡುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

ಪುತ್ತೂರು ರೈತ ಸಂಘದ ಸಮಾವೇಶ

ತಾ. 15-9-86 ರಂದು ಇಲ್ಲಿನ ಸರಕಾರಿ ನೌಕರರ ಸಭಾಂಗಣದಲ್ಲಿ ಜರಗಿದ ತಾಲೂಕು ಮಟ್ಟದ ಸಮಾವೇಶದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕಾ| ಪಿ. ಕೆ. ಸತೀಶನ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದ. ಕ. ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ| ಅಬ್ರಾಹಂ ಕರ್ಕಡ, ಕಾ| ಬಿ. ರಾಮಕೃಷ್ಣ ಮತ್ತು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕಾ| ಪರಮೇಶ್ವರನ್ ನಂಬೀಶನರು ಉಪಸ್ಥಿತರಿದ್ದರು.

ಆರಂಭದಲ್ಲಿ ರೈತ ಸಂಘದ ತಾಲೂಕು ಕಾರ್ಯದರ್ಶಿ ಕಾ| ಸಿ. ಅಣ್ಣನವರು ಸ್ವಾಗತಿಸಿ ಸಮಾವೇಶದ ಉದ್ದೇಶವನ್ನು ವಿವರಿಸಿದರು.

ಸಮಾವೇಶವನ್ನುದ್ದೆಶಿಸಿ ಪ್ರಸ್ತಾವಿಕ ಭಾಷಣ ಮಾಡಿದ ಕಾ|ಬಿ.ರಾಮಕೃಷ್ಣನವರು ಅಸಮಾನತೆ ತುಂಬಿರುವ ನಮ್ಮ ದೇಶದ ಚರಿತ್ರೆಯನ್ನು ರೈತ-ಕಾರ್ಮಿಕರ ಸಖ್ಯತೆಯ ಹೋರಾಟದ ಮೂಲಕ ಬದಲಾಯಿಸಬೇಕಾಗಿದೆ ಎಂದರು. ರೈತ ಕಾರ್ಮಿಕರು ಮುಂಬರುವ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಬೇಕಾದರೆ ಸಂಘಟನೆಯನ್ನು ಇನ್ನೂ ಚುರುಕುಗೊಳಿಸಬೇಕೆಂದು ತಿಳಿಸಿದರು.

ಬಳಿಕ ಮಾತನಾಡಿದ ಕಾ| ಅಬ್ರಾಹಂ ಕರ್ಕಡರು ಅಖಿಲ ಭಾರತ ಕಿಸಾನ ಸಭಾವು ರೈತ ಕಾರ್ಮಿಕರ ನೈಜ ಸಂಘಟನೆಯಾಗಿದೆ. ಭೂಸುಧಾರಣೆಗಾಗಿ ಅವಿಶ್ರಾಂತ ಹೋರಾಟ ಮಾಡಿದೆ. ದರ್ಖಾಸ್ತುದಾರರನ್ನು ಸಂಘಟಿಸಿ ಅವರನ್ನು ಒಕ್ಕಲೆಬ್ಬಿಸದಂತೆ ಹೋರಾಟ ನಡೆಸುತ್ತಾ ಬಂದಿದೆ. ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ರೈತ ಸಂಘವು ಸಕ್ರಿಯವಾದ ಪಾತ್ರ ವಹಿಸಬೇಕೆಂದು ಕರೆಯನ್ನಿತ್ತರು.

ಕಾ| ಪರಮೇಶ್ವರನ ನಂಬೀಶನವರು ಮಾತನಾಡಿ ರೈತ ಕಾರ್ಮಿಕರ ಹೋರಾಟದ ಧ್ವನಿಯಿಂದ ರೈತ ಸಂಘವನ್ನು ಬಲಪಡಿಸಲು ಕರೆಯಿತ್ತರು,

ರೈತ ಸಂಘದ ರಚನೆ

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ರಾಗುಟ್ಟಹಳ್ಳಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕವನ್ನು ರಚಿಸಲಾಗಿದೆ. ಸೆಪ್ಟೆಂಬರ್ 6 ರಂದು ನಡೆದ ಈ ಸಭೆಯ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲಾ ರೈತ ಸಂಘದ ಕಾರ್ಯದರ್ಶಿಗಳಾದ ಕಾ. ಜಿ. ವಿ. ಅಶ್ವತ್ಥನಾರಾಯಣ ರೆಡ್ಡಿ ವಹಿಸಿದ್ದರು. ಸಭೆಯಲ್ಲಿ ಕೆಳಕಂಡ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಆರ್ ಜಯರಾಮ ರೆಡ್ಡಿ- ಅಧ್ಯಕ್ಷ ಆರ್. ಎಸ್. ವೆಂಕಟರಮಣ- ಉಪಾಧ್ಯಕ್ಷ, ಆರ್. ಎಸ್. ರಘುನಾಥರೆಡ್ಡಿ- ಕಾರ್ಯದರ್ಶಿ, ವಿ. ರಾಯಪ್ಪ- ಸಹಕಾರ್ಯದರ್ಶಿ, ಅಲ್ಲದೆ ಏಳುಮಂದಿ ಸದಸ್ಯರನ್ನು ಆರಿಸಲಾಗಿದೆ.

ಕೃಷಿ ಕಾರ್ಮಿಕರ ಹೋರಾಟ

(ಪುರವಣಿ 4ನೇ ಪುಟದಿಂದ)

ಏಳಬಾರದು" ಎಂದಾಗ ಜಿಂದಾಬಾದ್, ಜಿಂದಾಬಾದ್ ಘೋಷಣೆಗಳು ಮೊಳಗಿದವು.

2 ಗಂಟೆಯಾಯಿತು 3 ಗಂಟೆಯಾಯಿತು. ಪೋಲಿಸರು ನೂರಾರು ಸಂಖ್ಯೆಯಲ್ಲಿ ಜಿಲ್ಲೆಯ ಹಲವು ಕಡೆಯಿಂದ ಬಂದರು. ಡಿ. ವೈ. ಎಸ್. ಪಿ. ಬಂದರು, ಬೆದರಿಸಿದರು, ಅವರ ಮಾತು ನಡೆಯಲಿಲ್ಲ.

ಸಮಾಧಾನ ಮಾಡಲು ಹೊರಟರು ಅವರ ಆಟ ನಡೆಯಲಿಲ್ಲ. ರೈತ ಕಾರ್ಮಿಕರ ಹಠ ಗೆದ್ದಿತು. ದೃಢತೆಗೆ ಜಯ ಸಿಕ್ಕಿತು.

ಡಿ.ವೈ.ಎಸ್.ಪಿ. ಬಂಧಿತರನ್ನು ಕೋರ್ಟಿನಲ್ಲಿ ಹಾಜರು ಮಾಡುವುದಕ್ಕೆ ಒಪ್ಪಿದ.

ಬಂಧಿತರು ಧರಣಿ ಮಾಡಿ ರೈತ-ಕಾರ್ಮಿಕರ ಸಭೆಯ ಮೂಲಕ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಒಯ್ಯಲ್ಪಟ್ಟರು. ಅಲ್ಲಿ ವಕೀಲವಾದ ನಡೆದು "ಜಾಮೀನಿನಲ್ಲಿ ಬಿಡದ ನಿಯಮಗಳಿದ್ದಾಗ್ಯೂ, ಮ್ಯಾಜಿಸ್ಟ್ರೇಟರು ವಿಶೇಷ ಅಧಿಕಾರವನ್ನು ಉಪಯೋಗಿಸಿ, ಖೈದಿಗಳನ್ನು ಜಾಮೀನಿನಲ್ಲಿ ಬಿಡುಗಡೆಗೊಳಿಸಿದರು.

ಜೈಕಾರ, ಜಿಂದಾಬಾದ್, ಭೂಮಾಲಿಕರಿಗೆ ಮುರ್ದಾಬಾದ್, ಪೋಲಿಸರಿಗೆ ಮುರ್ದಾಬಾದ್, ರೈತ ಸಂಘಕ್ಕೆ ಜಯವಾಗಲಿ, ರೈತ ಕಾರ್ಮಿಕರ ಸಖ್ಯತೆ ಜಯವಾಗಲಿ ಎಂಬ ಘೋಷಣೆಗಳು, ಕುಂದಾಪುರ ಪೇಟೆಯ ಬೀದಿಯುದ್ದಕ್ಕೂ ಮೊಳಗಿದವು.

ಹೊಸ ಪ್ಯಾಕೇಟಿನಲ್ಲಿ ಹಳೆ ಸರಕು

[ಪುರವಣಿ 1ನೇ ಪುಟದಿಂದ]

ಭೂ ಸುಧಾರಣೆಗೆ ಆ ಕಾನೂನು, ಈ ಕಾನೂನು ಮಾಡಲಾಗುತ್ತದೆ ಎಂದು ಸುದ್ದಿ ಹರಡುತ್ತಿದೆ, ಆದರೆ ಈಗಾಗಲೇ ಸರ್ಕಾರಿ ಗೂಡುಗಳಲ್ಲಿ ಕೊಳೆಯುತ್ತಿರುವ ಭೂಮಿತಿ ಕಾನೂನು ಯಾಕೆ ಜಾರಿಯಾಗಿಲ್ಲ ? ಅಷ್ಟೇ ಅಲ್ಲದೆ ಮೊದಲನೆಯ ನಿಜವಾದ ಕ್ರಾಂತಿಕಾರಿ ಭೂಮಸೂದೆಯನ್ನು ತಂದ ಕೇರಳ ಸರ್ಕಾರ ಉರುಳಿಸಿದ, ಇನ್ನೊಂದು ಭೂಮಸೂದೆ ತಿದ್ದುಪಡಿ ತಂದ ಪ. ಬಂಗಾಳದ ಕ್ರಮವನ್ನು ರಾಷ್ಟ್ರಪತಿ ಅಂಗೀಕಾರದ ಹೆಸರಲ್ಲಿ ನೆನೆಗುದಿಗೆ ಹಾಕಿದ ಕಾಂಗ್ರೆಸ್ ಸರ್ಕಾರದಿಂದ ಭೂಸುಧಾರಣೆ ಜಾರಿ ನಿರೀಕ್ಷಿಸಲು ಸಾಧ್ಯವೇ ?

ಸಂಭವಾಮಿ ಯುಗೇ ಯುಗೇ

ಹಾಗಾದರೆ ಈ 20 ಅಂಶ ಕಾರ್ಯಕ್ರಮಗಳ ಪುನರಪಿ ಅವತಾರಗಳ ಉದ್ದೇಶವಾದರೂ ಏನು? ದುಷ್ಟ ಸಂಹಾರ ಶಿಷ್ಟ ರಕ್ಷಣೆಗಲ್ಲವೇ ? ಭಾರತದ ಇತ್ತೀಚಿನ ರಾಜಕೀಯ ಬೆಳವಣಿಗೆಯನ್ನು ಗಮನಿಸಿದರೆ ಜನರ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಜೀವನ ಮಟ್ಟದ ಮೇಲೆ ಭಾರಿ ದಾಳಿ ನಡೆಸಬೇಕಾದಾಗೆಲ್ಲ ಈ ಹೊಸ ಅವತಾರಗಳು ಕಾಣಸಿಗುತ್ತವೆ. ಇದು ಜನರ ಮೇಲೆ ದಬ್ಬಾಳಿಕೆ ಮರೆಸಲು ಮಾಡುವ ಮೋಡಿ. ತಂತ್ರ. 20 ಅಂಶದ ಮೊದಲನೆಯ ಅವತಾರ ಕರಾಳ ತುರ್ತು ಪರಿಸ್ಥಿತಿ ಜತೆಗೆ ಆಯಿತು. ಮೂರನೆಯ ಅವತಾರ ಈಗ ಸಾರ್ವಜನಿಕ ಕ್ಷೇತ್ರವನ್ನು ದುರ್ಬಲಗೊಳಿಸುತ್ತಿರುವ, ಸಾಮ್ರಾಜ್ಯಶಾಹಿ ದಾಳಿಗೆ ಆರ್ಥಿಕತೆಯನ್ನು ಗುರಿ ಮಾಡುತ್ತಿರುವ ಈ ಸಂದರ್ಭದಲ್ಲಿ ಆಗುತ್ತಿದೆ. ಇದೇ 20 ಅಂಶದ ಈ ಹೊಸ ಅವತಾರ ಈಗ ಬರಲು ಕಾರಣ.

ಆದರೆ ಈ " ಹೊಸ " ಕಾರ್ಯಕ್ರಮದ ಹಿಂದೆ ಆಳುವವರಿಗೆ ನಮ್ಮ ಸಾಮಾನ್ಯ ಜನತೆಯ ಬಗೆಗಿರುವ ತಿರಸ್ಕಾರ ಗಮನಿಸಬೇಕಾದ್ದು. ರದ್ದಿ ಕಾಗದದ ಮೇಲೆ ಬರೆದ ಲದ್ದಿ ಕಾರ್ಯಕ್ರಮವನ್ನು ಅವರ ಮೇಲೆಸೆದರೂ, ಜನರು ತಮ್ಮ ಉದ್ಧಾರವಾಗುತ್ತಿದೆಯೆಂದು ಅಂದು ಕೊಂಡಿರುತ್ತಾರೆ ಎಂದು ಇವರು ತಿಳಿದಂತಿದೆ. ಇವರಿಗೆ ಹೇಳಬೇಕಾಗಿದೆ "ಸ್ವಾಮಿ ರಾಜೀವ ಗಾಂಧಿಯವರೇ, ಇಂತಹ ಅವತಾರಗಳನ್ನು ಬಹಳಷ್ಟು ಯಕ್ಷಗಾನ ನಾಟಕಗಳಲ್ಲಿ ಕಂಡಿದ್ದೇವೆ, ಇನ್ನು ಸಾಕು ಮಾಡಿ. "

ಹಳ್ಳಿ ಹಳ್ಳಿಗೆ ಹಬ್ಬಲಿ

[ಪುರವಣಿ 3ನೇ ಪುಟದಿಂದ]

5) ಪ್ರಜಾಸತ್ತಾತ್ಮಕ ಕಾರ್ಯಚರಣೆ-ಪಾಳೆಯಗಾರಿ-ಬಂಡವಾಳಶಾಹಿ ಮೌಲ್ಯಗಳಿಂದ ತುಂಬಿ ತುಳುಕುತ್ತಿರುವ ಈ ಸಮಾಜದಲ್ಲಿ, ವ್ಯಕ್ತಿವಾದವೇ ತುಂಬಿ ತುಳುಕುತ್ತಿರುವಾಗ, ಸಂಘಟನಾ ವ್ಯಾಪ್ತಿಗೆ ತರುವದು, ರೈತ ವರ್ಗದ ಶಕ್ತಿಯನ್ನು ಅರಿಯುವಂತೆ ಮಾಡಲು ಸಾಮೂಹಿಕ ಕಾರ್ಯಾಚರಣೆಯಿಂದ ಮಾತ್ರ ಸಾಧ್ಯ. ಆದರಿಂದ ಸಾಮೂಹಿಕ ನಾಯಕತ್ವವನ್ನು ಬೆಳೆಸಲು ಗ್ರಾಮದಿಂದ ಕೇಂದ್ರ ಸಮಿತಿಯವರೆಗೆ ಏಕತೆಯನ್ನು ತರಲು ಸಾಧ್ಯವಾಗುತ್ತದೆ. ಆಗ ಮಾತ್ರ ವ್ಯವಸ್ಥಿತ ಆಳುವ ವರ್ಗದ ವಿರುದ್ಧ ವ್ಯವಸ್ಥಿತ ಸಾಮೂಹಿಕ ಪ್ರಜಾಸತ್ತಾತ್ಮಕ ಸಂಘಟನೆ ಇಂದಿರಿಗಿ ನೀತು ರೈತವರ್ಗವನ್ನು ಮುಂದೆ ಕೊಂಡೊಯ್ಯಲು ಸಾಧ್ಯ.

6) ರೈತರ ಬೇಡಿಕೆಗಳನ್ನು ಪ್ರಜಾಸತ್ತಾತ್ಮಕವಾಗಿ ರೈತರೇ ರೂಪಿಸುವಂತಾಗಬೇಕು – ಪಾಳೇಯಗಾರಿ ಅರೆಪಾಳೆಯಗಾರಿ ಭೂಸಂಬಂಧಗಳ ಮೇಲೆ ಬಂಡವಾಳಶಾಹಿ ಸಮಾಜ ರಚನೆಯಾಗಿರುವಾಗ, ಗ್ರಾಮೀಣ ಪರಿಸ್ಥಿತಿಯನ್ನು, ರೈತರಬೇಡಿಕೆಗಳನ್ನು ಅವರ ಪ್ರಜ್ಞೆಯ ಮಟ್ಟವನ್ನು ಅರಿಯುವದು ಕ್ಲಿಷ್ಟ, ಕಾರಣ ಮೇಲಿನ ಹಂತದಲ್ಲಿರುವ ರೈತ ಕಾರ್ಯಕರ್ತರು ಮುಖಂಡರು ನೇರವಾಗಿ ಘೋಷಣೆ ಬೇಡಿಕೆಗಳನ್ನು ಕೊಡುವ ಮುಖಾಂತರ, ರೈತರನ್ನು ಸಂದಿಸದೇ ಹೋಗಬಹುದು ಹಾಗೂ ಸಂಘಟನೆ ತಮ್ಮದೆಂದು ರೈತರಲ್ಲಿ ಮೂಡಿಸುವುದು ಕಷ್ಟಕರ. ಕಾರಣ ರೈತರ ಮಧ್ಯೆ ಕೆಳಸಮಿತಿಗಳು ಸಂಗಾತಿಗಳು ನೇರವಾಗಿ ಇಳಿದು ಚರ್ಚೆ, ಸಭೆಗಳ ಮುಖಾಂತರ ಅವರ ಸಮಸ್ಯೆಗಳನ್ನು ಕ್ರೋಢೀಕರಿಸಿ ಬೇಡಿಕೆಗಳನ್ನು ರೂಪಿಸಲು ಸಾಧ್ಯವಾದಾಗ, ರೈತರು ದೊಡ್ಡರೀತಿಯಲ್ಲಿ ಎದ್ದು ಬರಲು ಸಾಧ್ಯವಾಗುತ್ತದೆ.

7) ಕಾರ್ಯಕರ್ತರಿಗೆ ತರಬೇತಿ –

ಈ ಮೇಲಿನ ಕಾರ್ಯ ನಿರ್ವಹಣೆಯನ್ನು ಮಾಡಬೇಕಾದಲ್ಲಿ ವ್ಯಾಪಕವಾದ ಕೆಳಹಂತದ ತರಬೇತಿಗಳು ನಡೆಯುವಂತಾಗಬೇಕು. ಇಲ್ಲವಾದಲ್ಲಿ ಕೇವಲ ಆರ್ಥಿಕ ಬೇಡಿಕೆಗಳಿಗೆ ಸೀಮಿತವಾಗಿ ಹೋರಾಟಕ್ಕೆ ಬಂದ ರೈತರು ಮುಂದೆ ಬರಲಾರರು ಅದರಲ್ಲಿರುವ ಆಸಕ್ತಿ, ಮಂಚೂಣಿತನವನ್ನು ಗುರುತಿಸಿ ಗ್ರಾಮ, ತಾಲೂಕು ಮಟ್ಟದಲ್ಲಿ ವ್ಯವಸ್ಥಿತ ತರಬೇತಿ ಶಿಬಿರಗಳಿಗೆ ಒಳಪಡಿಸಿದಾಗ ಮಾತ್ರ ಮೇಲ್ಮಟ್ಟದ ಪ್ರಜ್ಞೆಯನ್ನು ಪಡೆಯಲು ಸಂಘಟನೆಯ ವ್ಯಾಪ್ತಿಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ

ಅಂತರರಾಷ್ಟ್ರೀಯ

ಅಲಿಪ್ತ ಇತಿಹಾಸದ ಮೈಲಿಗಲ್ಲು – ಹರಾರೆ ಸಮ್ಮೇಳನ

ಈ ತಿಂಗಳ ಮೊದಲ ವಾರದಲ್ಲಿ ಜಿಂಬಾಬ್ವೆಯ ರಾಜಧಾನಿ ಹರಾರೆಯಲ್ಲಿ ನಡೆದ ಅಲಿಪ್ತ ಆಂದೋಲನದ 8ನೇ ಶೃಂಗ ಸಭೆ ಈ ಆಂದೋಲನದ ಇತಿಹಾಸದಲ್ಲಿ ಒಂದು ಪ್ರಮುಖ ಅಧ್ಯಾಯ. ಸಾಮ್ರಾಜ್ಯಶಾಹಿಗಳು ಮತ್ತು ನವ-ವಿಮೋಚಿತ ದೇಶಗಳ ನಡುವಿನ ವೈರುಧ್ಯ ತೀವ್ರ ಸ್ಥಿತಿ ತಲುಪುವ ಹಿನ್ನೆಲೆಯಲ್ಲಿ ನಡೆದ ಈ ಸಮ್ಮೇಳನದಲ್ಲಿ ಎಲ್ಲೆಲ್ಲೂ ಒಗ್ಗಟ್ಟಿನ ವಾತಾವರಣ ಕಂಡುಬಂದಿತು. ಆಂದೋಲನದಲ್ಲಿರುವ ತನ್ನ ಕೆಲವು ಏಶ್ಯನ್ ಹಾಗೂ ಅರಬ್ ಹಿಂಬಾಲಕರ ಮೂಲಕ ಅಮೆರಿಕನ್ ಸಾಮ್ರಾಜ್ಯಶಾಹಿ ಈ ಒಗ್ಗಟ್ಟನ್ನು ಕದಡಲು ನಡೆಸಿದ ಯತ್ನ ಪೂರ್ಣ ವಿಫಲಗೊಂಡಿತು (ಈ ಶೃಂಗ ಸಭೆ ಇಂಡೋನೇಶ್ಯಾದಲ್ಲಿ ನಡೆಯುವಂತೆ ಮಾಡುವ ಅದರ ಯತ್ನ ಈ ಮೊದಲೆ ವಿಫಲಗೊಂಡಿತು).

ಈ ಶೃಂಗ ಸಭೆಯ ಕಾರ್ಯಕಲಾಪಗಳಲ್ಲಿ ಭಾರತ ಮಹತ್ವದ ಪಾತ್ರವಹಿಸಿ ಹವಾನಾ ಹಾಗೂ ದಿಲ್ಲಿ ಸಮ್ಮೇಳನಗಳು ಉಂಟುಮಾಡಿದ್ದ ಚೈತನ್ಯವನ್ನು ಮುಂದುವರಿಸಲು ಪ್ರಯತ್ನಿಸಿತು. ಆದರೂ ರಾಜೀವ ಗಾಂಧಿಯವರು ಶೃಂಗ ಸಭೆಯ ಉದ್ಘಾಟನೆ, ಆಂದೋಲನದ ಬೆಳ್ಳಿ ಹಬ್ಬ ಸ್ಮಾರಕಾರ್ಥ ಸಭೆ ಹಾಗೂ ಅಧ್ಯಕ್ಷಸ್ಥಾನ ಬಿಟ್ಟುಕೊಡುವ ಸಂದರ್ಭದಲ್ಲಿ ಮಂಡಿಸಿದ ವರದಿ–ಹೀಗೆ ತನ್ನ ಮೂರೂ ಭಾಷಣಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಬಗ್ಗೆಯಾಗಲೀ ಲಿಬ್ಯಾ ಹಾಗು ಗ್ರೆನಾಡಾದಲ್ಲಿ ಅದರ ಹಸ್ತಕ್ಷೇಪದ ಬಗ್ಗೆಯಾಗಲೀ ಪ್ರಸ್ತಾಪ ಮಾಡದಿರುವುದು ಖೇದಕರ.

ಒಡಕು ಸ್ವರಕ್ಕೆ ಅವಕಾಶ ಇಲ್ಲ

ಆದರೆ ಆಂದೋಲನದ ಹೊಸ ಅಧ್ಯಕ್ಷರಾದ ಜಿಂಬಾಬ್ವೆಯ ಪ್ರಧಾನಿ ರಾಬರ್ಟ್ ಮುಗಾಬೆಯವರು ಅಮೆರಿಕನ್ ಸಾಮ್ರಾಜ್ಯಶಾಹಿಗಳನ್ನು ಹೆಸರೆತ್ತಿ ಖಂಡಿಸಲು ಹಿಂಜರಿಯಲಿಲ್ಲ. ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋರವರು ಅಮೆರಿಕಾ ಹಾಗೂ ಅದರ ಬಾಲಬಡುಕರಿಗೆ ತಕ್ಕ ಉತ್ತರ ನೀಡುತ್ತಾ ಮಾಡಿದ ತನ್ನ ಭಾಷಣದಲ್ಲಿ ನಮೀಬಿಯಾದ ಸ್ವಾತಂತ್ರ್ಯಕ್ಕೂ ಅಂಗೋಲಾದಿಂದ ಕ್ಯೂಬಾ ಪಡೆಗಳನ್ನು ವಾಪಸು ಪಡೆಯುವುದಕ್ಕೂ ಗಂಟು ಹಾಕುವ ಪ್ರಯತ್ನವನ್ನು ಧಿಕ್ಕರಿಸುತ್ತಾ "ಅಂಗೋಲಾದಲ್ಲಿ ಕ್ಯೂಬಾ ಪಡೆಗಳು ಒಂದು ನಿರ್ದಿಷ್ಟ ನೀತಿಯ ಆಧಾರದ ಮೇಲೆ ನಿಂತಿವೆ. ಕ್ಯೂಬಾದ ರಾಷ್ಟ್ರೀಯ ಹಿತಾಸಕ್ತಿ ಅಥವಾ ಪ್ರತಿಷ್ಠೆಯ ಆಧಾರದ ಮೇಲಲ್ಲ" ಎಂದು ಸ್ಪಷ್ಟವಾಗಿ ಹೇಳಿದರು.

ಸ್ಯಾಂಡಿನಿಸ್ಟಾ ಮುಖಂಡ ನಿಕಾರಾಗುವ ಗಣತಂತ್ರದ ಅಧ್ಯಕ್ಷ ಡೇನಿಯಲ್ ಒರ್ಟೆಗಾ ತನ್ನ ಪ್ರಭಾವ ಪೂರ್ಣ ಭಾಷಣದಲ್ಲಿ ಪ್ರತಿಯೊಂದು ಅಭಿವೃದ್ಧಿಶೀಲ ದೇಶ ತನ್ನದೇ ಸ್ವತಂತ್ರ ಅಭಿವೃದ್ಧಿ ಮಾರ್ಗ ಅನುಸರಿಸುವ ಹಕ್ಕು ಇದೆಯೆಂದು ಪ್ರತಿಪಾದಿಸಿ ನಿಕಾರಾಗುವ ತಾನು ಹೇಳಿದಂತೆ ಕುಣಿಯಬೇಕೆನ್ನುವ ಅಮೇರಿಕನ್ ದರೋಡೆಕೋರ ಪ್ರಯತ್ನವನ್ನು ಖಂಡಿಸಿದಾಗ ಪ್ರತಿನಿಧಿಗಳಿಂದ ಅಗಾಧ ಬೆಂಬಲ ವ್ಯಕ್ತಗೊಂಡಿತು.

ಈ ನಾಲ್ಕು ಭಾಷಣಗಳು ಸಮ್ಮೇಳನದ ಕಲಾಪಗಳಿಗೆ ಒಂದು ಸರಿಯಾದ ದಾರಿ ಹಾಕಿಕೊಟ್ಟ ಪರಿಣಾಮವಾಗಿ ಒಡಕಿನ ಸ್ವರ ಏಳಲು ಅವಕಾಶವೇ ಆಗಲಿಲ್ಲ. ಅಫಘಾನಿಸ್ಥಾನ, ಕಂಪೂಚಿಯಾದ ಪ್ರಶ್ನೆ ಎತ್ತಿ ಚರ್ಚೆಯನ್ನು ದಿಕ್ಕು ತಪ್ಪಿಸುವ ಕೆಲವು ಅಮೇರಿಕನ್ ಬಾಲಬಡುಕರ ಪ್ರಯತ್ನಕ್ಕೆ ಏನೇನೂ ಬೆಂಬಲ ಸಿಗದಾಯಿತು.

ಮಾತಿನಿಂದ ಕೃತಿಯತ್ತ

ಶೃಂಗ ಸಭೆ ಮೂರು ಪ್ರಮುಖ ದಸ್ತಾವೇಜುಗಳನ್ನು—ಶೃಂಗಸಭೆಯ ಘೋಷಣೆಗೆ, ಆರ್ಥಿಕ ಸಮಸ್ಯೆಗಳ ಕುರಿತು ಠರಾವು ಹಾಗೂ ಶಾಂತಿ ಮನವಿ–ಅಂಗೀಕರಿಸಿತು. ಇವುಗಳಲ್ಲಿ ಯಾರಿಗೂ ಮನನೋಯಿಸಲಾರದಂತಹ ಭಾಷೆಯನ್ನು ಬಳಸಲಾಗಿದ್ದರೂ ಅಭಿವೃದ್ಧಿಶೀಲ ದೇಶಗಳು ಮತ್ತು ಸಾಮ್ರಾಜ್ಯಶಾಹಿ– ಪ್ರಮುಖ್ಯತ ಅಮೆರಿಕನ್ ಸಾಮ್ರಾಜ್ಯಶಾಹಿ–ನಡುವಣ ಘರ್ಷಣೆ ಸ್ಪಷ್ಟವಾಗಿ ಕಾಣುತ್ತಿದೆ. ಒಂದು ದಸ್ತಾವೇಜದಲ್ಲಿ 34 ಬಾರಿ ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಹೆಸರಿಸಲಾಗಿದೆ. ಇದೊಂದು ಅಮೆರಿಕಾ ವಿರೋಧಿ ಘೋಷಣೆಯೆಂದು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಸಿಟ್ಟು ವ್ಯಕ್ತಪಡಿಸಿದುದರಲ್ಲಿ ಆಶ್ಚರ್ಯವೇನಿಲ್ಲ. ವಿಶ್ವದ ಮುಂದಿರುವ ಮೂರು ಪ್ರಮುಖ ಸಮಸ್ಯೆಗಳ ಬಗ್ಗೆ ಶೃಂಗ ಸಭೆಯ ಘೋಷಣೆಯಲ್ಲಿ ದೃಢವಾದ ನಿಲುವನ್ನು ತಳೆಯಲಾಗಿದೆ. ಪರಮಾಣು ನಿಶ್ಶಸ್ತ್ರೀಕರಣ ಹಾಗೂ ಪರಮಾಣು ಅಸ್ತ್ರಗಳ ಪರೀಕ್ಷಣೆ ನಿಲುಗಡೆ; ವರ್ಣದ್ವೇಷ ನೀತಿಯ ನಿರ್ಮೂಲನ, ಸೀಮಾವರ್ತಿ ದೇಶಗಳಿಗೆ ಬೆಂಬಲ ಹಾಗೂ ನಮೀಬಿಯಾದ ಸ್ವಾತಂತ್ರ್ಯ ವಿಶ್ವ, ಮುಖ್ಯತಃ ಅಭಿವೃದ್ಧಿಶೀಲ ದೇಶಗಳು ಎದುರಿಸುತ್ತಿರುವ ಗಂಭೀರ ಆರ್ಥಿಕ ಬಿಕ್ಕಟ್ಟು–ಇವೇ ಆ ಮೂರು ಪ್ರಮುಖ ಸಮಸ್ಯೆಗಳು. ಈ ಮೂರರಲ್ಲೂ ಪಾಶ್ಚಿಮಾತ್ಯ ದೇಶಗಳೊಂದಿಗೆ ಮುಖ್ಯವಾಗಿ ಅಮೆರಿಕಾದೊಂದಿಗೆ ಅಭಿವೃದ್ಧಿಶೀಲ ದೇಶಗಳು ಘರ್ಷಿಸಬೇಕಾದ ಸ್ಥಿತಿ ಇರುವುದನ್ನೂ ಈ ಘೋಷಣೆಯಲ್ಲಿ ಗುರುತಿಸಲಾಗಿದೆ.

ಶೃಂಗ ಸಮ್ಮೇಳನ ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಸರ್ಕಾರದ ವಿರುದ್ಧ ಹದಿಮೂರು ಅಂಶಗಳ ದಿಗ್ಬಂಧನದ ಕಾರ್ಯಕ್ರಮವನ್ನು ಅಂಗೀಕರಿಸಿ ವಿದೇಶಾಂಗ ಮಂತ್ರಿಗಳ ಸಮಿತಿಯೊಂದು ಅಮೆರಿಕಾ, ಬ್ರಿಟನ್, ಪಶ್ಚಿಮ ಜರ್ಮನಿ ಮತ್ತು ಜಪಾನ್ ಈ ನಿಬಂಧನೆಗಳಿಗೆ ಒಪ್ಪುವಂತೆ ಒತ್ತಾಯಿಸಬೇಕೆಂದು ನಿರ್ಧರಿಸಿತು. ಇಂತಹ ನಿರ್ಬಂಧಗಳಿಂದ ಸೀಮಾವರ್ತಿ ಆಫ್ರಿಕನ್ ದೇಶಗಳಿಗೆ ತೊಂದರೆಯಾಗದಂತೆ ನೆರವಾಗಲು "ಅತಿಕ್ರಮಣ, ವಸಾಹತುಶಾಹಿ ಮತ್ತು ವರ್ಣದ್ವೇಷ ಪ್ರತಿರೋಧಕ ಕಾರ್ಯಾಚರಣೆ ನಿಧಿ" ಸ್ಥಾಪಿಸಲು ನಿರ್ಧರಿಸಲಾಯಿತು. ಭಾರತ ಇದರ ಅಧ್ಯಕ್ಷತೆ ವಹಿಸುತ್ತದೆ. ಬದಲಾಗುತ್ತಿರುವ ಜಾಗತಿಕ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಹಣ, ಹಣಕಾಸು ಸಾಲ, ವ್ಯಾಪಾರ ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಅಂತರ್‍ರಾಷ್ಟ್ರೀಯ ಆರ್ಥಿಕ ಸಹಕಾರಕ್ಕೆ ಅನುಕೂಲವಾದ ಧೋರಣೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಪರಾಮರ್ಶಿಸಿ, ಸಂಯೋಜಿಸಲು ಅಲಿಪ್ತ ಹಾಗೂ ಇತರ ಅಭಿವೃದ್ಧಿಶೀಲ ದೇಶಗಳ ಒಂದು ಆಯೋಗ ಸ್ಥಾಪಿಸಲು ಶೃಂಗಸಭೆ ನಿರ್ಧರಿಸಿತು. ತಾಂಜಾನಿಯದ ಮಾಜೀ ಅಧ್ಯಕ್ಷ ಜ್ಯೂಲಿಯಸ್ ನೈರೇರೆ ಇದರ ಅಧ್ಯಕ್ಷರಾಗಿರುತ್ತಾರೆ.

ಸಮಾಜವಾದಿ ಬುಲ್ಗಾರಿಯಾ – ಪ್ರಗತಿಯ ಹಾದಿಯಲ್ಲಿ

ಸೆಪ್ಟಂಬರ್ 9. ಬುಲ್ಗಾರಿಯಾ ಗಣತಂತ್ರದ ರಾಷ್ಟ್ರೀಯ ದಿನ. 42 ವರ್ಷಗಳ ಹಿಂದೆ ಅಂದರೆ 1944ರಲ್ಲಿ ಬುಲ್ಗಾರಿಯಾ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ವಿಮೋಚನೆ ಗೊಂಡಾಗ ಈ ದೇಶ ಒಂದು ಹಿಂದುಳಿದ ಕೃಷಿಪ್ರಧಾನ ದೇಶವಾಗಿತ್ತು. ಈಗ ಇದೊಂದು ಅತ್ಯಾಧುನಿಕ ಕೈಗಾರಿಕಾ ದೇಶ. 1956 ರಲ್ಲಿ ಒಂದು ವರ್ಷದಲ್ಲಿ ಮಾಡುತ್ತಿದ್ದ ಉತ್ಪಾದನೆಯಲ್ಲಿ ಈಗ ಕೇವಲ ಒಂದೇ ತಿಂಗಳಲ್ಲಿ ಮಾಡಲಾಗುತ್ತಿದೆ. ಪರಮಾಣು,ವಿದ್ಯುಚ್ಛಕ್ತಿ ಸ್ಥಾವರಗಳನ್ನು ಕಟ್ಟಿಕೊಂಡ ಮೊದಲ ಬಾಲ್ಕನ್ ದೇಶ ಬುಲ್ಗಾರಿಯಾ. ಈಗ ಈ ದೇಶದ ಒಟ್ಟು ವಿದ್ಯುಚ್ಛಕ್ತಿ ಬಳಕೆಯ 33% ಪರಮಾಣು ಸ್ಥಾವರಗಳಿಂದಲೇ ಪೂರೈಕೆಯಾಗುತ್ತಿದೆ.

ಯಂತ್ರಗಳ ಉತ್ಪಾದನೆ ಬುಲ್ಗಾರಿಯಾದ ಪ್ರಮುಖ ಉದ್ಯಮ. ಇಡೀ ದೇಶದಲ್ಲಿ ಯಂತ್ರ ತಯಾರಿಕಾ ಘಟಕಗಳಿಲ್ಲದ ಪಟ್ಟಣಗಳ ಸಂಖ್ಯೆ ಬೆರಳೆಣಿಕೆಯಷ್ಟು. ಅಲ್ಲದೆ ಕಂಪ್ಯೂಟರ್ ಮುಂತಾದ ಆಧುನಿಕ ಉದ್ಯಮಗಳಲ್ಲೂ ಈ ದೇಶ ದಾಪುಗಾಲಿಟ್ಟು ಮುನ್ನುಗ್ಗುತ್ತಿದೆ.

ಈ ರೀತಿಯ ರಾಷ್ಟ್ರೀಯ ಆರ್ಥಿಕ ಪ್ರಗತಿಯ ಜೊತೆಗೆ ಜನತೆಯ ಜೀವನ ಮಟ್ಟವನ್ನು ಎತ್ತರಿಸಲೂ ಸರ್ವತೋಮುಖ ಪ್ರಯತ್ನ ನಡೆದಿದೆ. ಮಕ್ಕಳ ಪೋಷಣೆಗೆ ವಿಶೇಷ ಗಮನ ನೀಡಲಾಗುತ್ತಿದೆ. ಮಗುವಿಗೆ ಎರಡು ವರ್ಷಗಳಾಗುವವರೆಗೆ ತಾಯಿಗೆ ವೇತನ ಸಹಿತ ರಜಾದ ಸೌಲಭ್ಯ ನೀಡಲಾಗಿದೆ. ಆರು ವರ್ಷಗಳ ವರೆಗೆ ಎಲ್ಲಾ ಮಕ್ಕಳಿಗೂ ಪುಕ್ಕಟೆ ಔಷಧಿ ಪೂರೈಕೆ. ಅನಕ್ಷರತೆಯನ್ನು ಪೂರ್ಣವಾಗಿ ನಿವಾರಿಸಲಾಗಿದೆ. ಹೊಸ ಪೀಳಿಗೆಯಲ್ಲಿ ಹೆಚ್ಚಿನವರು ಪ್ರೌಢಶಾಲಾ ಶಿಕ್ಷಣ ಪಡೆದಿದ್ದಾರೆ. ವಸತಿ ಸೌಲಭ್ಯಗಳನ್ನು ಗಣನೀಯವಾಗಿ ಎತ್ತರಿಸಲು ಬುಲ್ಗಾರಿಯಾ ಸರ್ಕಾರ ಪ್ರಾಧಾನ್ಯತೆ ನೀಡಿದೆ. ಈಗ ತಲಾ 16 ಚದರ ಮೀಟರ್ ವಸತಿ ಸೌಲಭ್ಯ ಬುಲ್ಗಾರಿಯಾ ನಾಗರಿಕರಿಗೆ ದೊರೆತಿದೆ.

ರಾಷ್ಟ್ರೀಯ ದಿನಾಚರಣೆಯ ಸಂದರ್ಭದಲ್ಲಿ ಸಿ.ಪಿ.ಐ (ಎಂ) ಬುಲ್ಗಾರಿಯಾ ನಾಗರೀಕರ ಹಾಗೂ ಅವರಿಗೆ ನೇತೃತ್ವ ನೀಡುತ್ತಿರುವ ಬುಲ್ಗಾರಿಯಾ ಕಮ್ಯೂನಿಸ್ಟ್ ಪಕ್ಷವನ್ನು ಹಾರ್ದಿಕವಾಗಿ ಅಭಿನಂದಿಸಿದೆ.

ಇಥಿಯೋಪಿಯಾ : ಪುನರ್ಜನ್ಮಕ್ಕೆ ಸಿದ್ಧತೆ

ಇಥಿಯೋಪಿಯಾದಲ್ಲಿ ಈಗ ದೇಶಾದ್ಯಂತ ಕಾರ್ಮಿಕರು, ರೈತರು, ಬುದ್ಧಿಜೀವಿಗಳು, ಕಲಾವಿದರು, ಸೈನಿಕರು ಮತ್ತು ಸಮಸ್ತ ಜನತೆ ಭವಿಷ್ಯದ "ಇಥಿಯೋಪಿಯಾ ಜನತಾ ಪ್ರಜಾಪ್ರಭುತ್ವ ಗಣತಂತ್ರ"ದ ಸಂವಿಧಾನದ ಕರಡಿನ ಬಗ್ಗೆ ವಿವರವಾದ ಚರ್ಚೆ ನಡೆಸುತ್ತಿದ್ದಾರೆ. 343 ಸದಸ್ಯರುಳ್ಳ ಒಂದು ಸಂವಿಧಾನ ಆಯೋಗ ಈ ವರ್ಷದ ಫೆಬ್ರವರಿಯಿಂದ ಕೆಲಸ ಮಾಡುತ್ತಿದೆ. ಇದೊಂದು ಇಥಿಯೋಪಿಯಾ ಕಾರ್ಮಿಕ ಪಕ್ಷದ ಸದಸ್ಯರು, ವಿಜ್ಞಾನಿಗಳು, ಸೈನಿಕರು, ರೈತರು, ಲೇಖಕರು, ಧರ್ಮಗುರುಗಳು ಇರುವ ಪ್ರಜಾಸತ್ತಾತ್ಮಕ ಸಂಸ್ಥೆ (ಒಬ್ಬ ಪಾಪ್ ಹಾಡುಗಾರ ಕೂಡಾ ಇದರಲ್ಲಿದ್ದಾನೆ). ಜೂನ್ ತಿಂಗಳಲ್ಲಿ ಈ ಆಯೋಗ ಇಥಿಯೋಪಿಯಾದ 15 ಪ್ರಮುಖ ಭಾಷೆಗಳಲ್ಲಿ ಸಂವಿಧಾನದ ಕರಡನ್ನು ಪ್ರಕಟಿಸಿತು.

ಈ ಸಂವಿಧಾನ ಇಥಿಯೋಪಿಯಾದ ಇತಿಹಾಸದಲ್ಲಿ ಮೊದಲಿನದೇನಲ್ಲ. 1931ರಲ್ಲಿ ಹೆಲೀ ಸೆಲಾಸಿ ಸಾಮ್ರಾಟ್ ಪಟ್ಟಕ್ಕೇರಿದಾಗ ಒಂದು, ತನ್ನ ಕಾಲು ಶತಮಾನದ ಆಳ್ವಿಕೆಯ ನಂತರ 1955 ರಲ್ಲಿ ಇನ್ನೊಂದು ಸಂವಿಧಾನವನ್ನು ಬಳಕೆಗೆ ತಂದಿದ್ದ. ಆದರೆ ಇವು ಕೇವಲ ರಾಜಪ್ರಭುತ್ವಕ್ಕೆ ಅಂಗೀಕಾರದ ಮುದ್ರೆಯೊತ್ತುವ ಅವಕಾಶವನ್ನಷ್ಟೇ ನೀಡಿದ ಸಂವಿಧಾನಗಳು. 1974ರ ಕ್ರಾಂತಿಯಲ್ಲಿ ಆತನ ಸರ್ವಾಧಿಕಾರ ಅಂತ್ಯಗೊಂಡ ನಂತರ ಈ ನಕಲಿ ಪ್ರಜಾತಂತ್ರದ ಸಂವಿಧಾನವೂ ಅಂತ್ಯಗೊಂಡಿತು.

ಹೊಸ ಕರಡಿನಲ್ಲಿ ಇಥಿಯೋಪಿಯಾ ದುಡಿಯುವ ಜನಗಳ ಪ್ರಭುತ್ವ–ಬುದ್ಧಿಜೀವಿಗಳು, ಕ್ರಾಂತಿಕಾರೀ ಸೈನಿಕರು ಕುಶಲ ಕಲೆಗಾರರ ಹಾಗೂ ಇತರ

(8ನೇ ಪುಟನೋಡಿ)

ಮೀಸಲಾತಿ ಪ್ರಶ್ನೆ ಸೌಹಾರ್ದಯುತವಾಗಿ ಬಗೆ ಹರಿಯಲಿ

ಮೀಸಲಾತಿ ನೀತಿ ಜಾತಿ-ಜಾತಿಗಳೊಳಗೆ ಜಗಳಕ್ಕೆ ಅವಕಾಶ ಮಾಡಿಕೊಡದಿರಲಿ. ಹಿಂದುಳಿದಿರುವಿಕೆ, ಬಡತನ, ನಿರುದ್ಯೋಗಗಳಂಥ ಸಮಸ್ಯೆಗಳನ್ನು ದುರುಪಯೋಗಪಡಿಸಿಕೊಂಡು ಅಮೆರಿಕನ್ ಸಾಮ್ರಾಜ್ಯಶಾಹಿ, ಕ್ರಿಶ್ಚಿಯನ್ ಮೆಶಿನರಿ, ಛಿದ್ರಕಾರಿ ಶಕ್ತಿಗಳು ಹಾಗೆಯೇ ಜಾತೀಯ ಮತಾಂಧರು ದೇಶದ ಭದ್ರತೆ ಐಕ್ಯತೆಗೆ ಅಪಾಯವನ್ನುಂಟು ಮಾಡುತ್ತಿರುವಾಗ ಅತ್ಯಂತ ಸಂಯಮದಿಂದ ಮೀಸಲಾತಿ ಸಮಸ್ಯೆಯನ್ನು ಬಗೆಹರಿಸುವುದು ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಅತ್ಯಗತ್ಯ. ಗುಜರಾತ್-ಆಂಧ್ರ ರಾಜ್ಯಗಳಲ್ಲಿ ಮೀಸಲಾತಿ ಪರ ಮತ್ತು ಮೀಸಲಾತಿ ವಿರೋಧ ಚಳುವಳಿ ಅಪಾಯಕಾರಿಯಾಗಿ ಪರಿವರ್ತನೆಗೊಂಡಿರುವುದನ್ನು ಕಂಡೂ ಕರ್ನಾಟಕದಲ್ಲಿ ಹೆಗಡೆ ಸರಕಾರ ಅದರ ಅಪಾಯವನ್ನು ಗುರ್ತಿಸದೆ, ವೆಂಕಟಸ್ವಾಮಿ ವರದಿಯನ್ನು ತನ್ನ ಸಚಿವ ಸಂಪುಟದಲ್ಲಿ ಚರ್ಚಿಸದೆ, ಒಂದು ಅಭಿಪ್ರಾಯಕ್ಕೆ ಬಾರದೆ, ಏಕಾಏಕಿಯಾಗಿ ವಿಧಾನ ಸಭೆಯಲ್ಲಿ ಆ ವರದಿಯನ್ನು ಮಂಡಿಸಿ, ಚಳುವಳಿಗೆ ಅವಕಾಶಮಾಡಿಕೊಟ್ಟು ದೊಡ್ಡ ತಪ್ಪು ಮಾಡಿದೆಂದು ಸಿ. ಪಿ. ಐ. (ಎಂ) ಸೆಕ್ರೆಟಾರಿಯೇಟ್ ಸದಸ್ಯರಾದ ಎಸ್. ಸೂರ್ಯನಾರಾಯಣರಾವ್ ಅವರು ತಾ. 22 ರಂದು ವೆಂಕಟಸ್ವಾಮಿ ಆಯೋಗದ ಕುರಿತು ಚರ್ಚಿಸುವ ಸಲುವಾಗಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಕರೆದ ರಾಜಕೀಯ ಪಕ್ಷಗಳ ಮುಖಂಡರ ಹಾಗೂ ವಿವಿಧ ಕೋಮಿನ ಮುಖಂಡರ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು. ಮೀಸಲಾತಿಯಿಂದ ಮಾತ್ರ ಹಿಂದುಳಿದವರ ಸಮಸ್ಯೆಗಳ ಪರಿಹಾರಕ್ಕೆ ರಾಮಬಾಣವಲ್ಲೆಂದೂ ಆದರೆ ಈಗಿನ ರಾಜಕೀಯ ಸಾಮಾಜಿಕ ಪದ್ಧತಿಯಲ್ಲಿ ಎಲ್ಲ ಜಾತಿಯಲ್ಲಿಯೂ ಬಡತನವಿರುವುದರಿಂದ ಜಾತಿ ಹಾಗೂ ಆದಾಯದ ತಳಹದಿಯಲ್ಲಿ ಮೀಸಲಾತಿ ಪ್ರಶ್ನೆಯನ್ನು ಒಟ್ಟಭಿಪ್ರಾಯ ಬರುವ ರೀತಿಯಲ್ಲಿ ಬಗೆ ಹರಿಸುವ ಅವಶ್ಯಕತೆಯನ್ನು ಒತ್ತಿ ಹೇಳಿ ವೆಂಕಟಸ್ವಾಮಿ ಆಯೋಗದ ವಿರುದ್ಧ ನಡೆದಿರುವ ಚಳುವಳಿಯನ್ನು ನಿಲ್ಲಿಸಲು ಎಲ್ಲ ರಾಜಕೀಯ ಪಕ್ಷಗಳೂ ಜಾತೀಯ ಧುರೀಣರೂ ಮನವಿಮಾಡಿಕೊಳ್ಳಬೇಕೆಂದು ಕರೆ ನೀಡಿದರು.

ಬಂಡವಾಳಶಾಹಿ ಪಕ್ಷಗಳಾದ ಕಾಂಗ್ರೆ, ಜನತಾಗಳಲ್ಲಿ ಮೀಸಲಾತಿ ಕುರಿತು ಒಮ್ಮತವಿಲ್ಲದಾಗಿದೆ. ಕಾಂಗ್ರೆಯ ಬಂಗಾರಪ್ಪ, ಎಚ್. ಎನ್. ನಂಜೇಗೌಡ ಮೊದಲಾದ ನಾಲ್ಕುಜನ ಆಮಂತ್ರಿತರು ಸಭೆ ಬಿಟ್ಟು ಹೊರಗೆ ಹೋದರು. ಆದರೆ ಕಾಂಗ್ರೆ ಅಧ್ಯಕ್ಷ ಆಸ್ಕರ್ ಫರ್ನಾಂಡೀಸ್, ವೀರಪ್ಪ ಮೋಯಿಲಿ, ಬಸವರಾಜೇಶ್ವರಿ ಮೊದಲಾದವರು ಸಭೆಯಲ್ಲೇ ಉಪಸ್ಥಿತರಿದ್ದರು. ಜನತಾ ಪಕ್ಷದವರು ಒಮ್ಮತದ ಅಭಿಪ್ರಾಯ ವ್ಯಕ್ತಮಾಡಲಿಲ್ಲ. ವೀರಶೈವ-ಒಕ್ಕಲಿಗ ಜಾತಿಗಳಿಗೆ ಸೇರಿದ ಜನತಾ ಶಾಸಕರೂ, ಮುಖಂಡರೂ ತಂತಮ್ಮ ಜಾತಿಯನ್ನೇ ಬೆಂಬಲಿಸಿ ಭಾಷಣ ಮಾಡಿದರು. ಮೂವರು ಜನತಾದವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ,

ಶೇ. 68 ರಷ್ಟು ಒಟ್ಟು ಮೀಸಲಾತಿಯನ್ನು ಉಳಿಸಿಕೊಳ್ಳುವುದಾಗಿಯೂ ಯಾವ ಜಾತಿಗೂ ಅನ್ಯಾಯವಾಗದ ರೀತಿಯಲ್ಲಿ ಸಮಸ್ಯೆ ಬಗೆ ಹರಿಸಲಾಗುವುದೆಂಬ ಸಮಾಧಾನದ ಮಾತನ್ನು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಆಡಿದರು. ಮೀಸಲಾತಿ ಪ್ರಶ್ನೆ ಬಹಳಷ್ಟು ದೊಡ್ಡದಾಗಿ ಬೆಳೆದು ಬಂದಿರುವುದರಿಂದ ಅದನ್ನು ಕಡೆಗಣಿಸುವುದಾಗಲೀ ವಿರೋಧಿಸುವುದಾಗಲಿ, ಸಾಧ್ಯವಿಲ್ಲ.

ಜಾತಿ-ಉಪಜಾತಿಗಳ ಈ ಮೀಸಲಾತಿ ಪ್ರಶ್ನೆ, ದೇಶಾದ್ಯಂತ ಅಪಾರವಾಗಿ ಬೆಳೆದಿರುವ ನಿರುದ್ಯೋಗ ಸಮಸ್ಯೆಯ ಅಂಚನ್ನೂ ಮುಟ್ಟಲಾರದಂತಿದೆಂದು ನಮಗೆ ಖಾತರಿಯಾಗಿದ್ದರೂ ಕೂಡ, ಮೇಲಿಂದ ಮೇಲೆ ಎತ್ತಲಾಗುತ್ತಿರುವ ಈ ಪ್ರಶ್ನೆಗೆ ಸಮರ್ಪಕವಾದ ಮಾರ್ಗ ಕಂಡುಹಿಡಿಯುವುದು ಅಗತ್ಯವೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಭಿಪ್ರಾಯಪಟ್ಟಿದೆ.

ಇತರ ರಾಜಕೀಯ ಪಕ್ಷಗಳೂ ಜಾತಿ ಮತಾಂಧರೂ ಮತ ಗಳಿಕೆಗಾಗಿಯೇ ಜಾತಿಯನ್ನವಲಂಬಿಸಿರುವವರ ಅಪಪ್ರಚಾರ ಪ್ರಚೋದನೆಗಳಿಗೆ ಸಾಮಾನ್ಯ ಜನರು ಬಲಿಯಾಗದಂತೆ ಮಾಡಿ, ಮೀಸಲಾತಿಯ ಲಾಭ ಎಲ್ಲ ಜಾತಿಗಳಲ್ಲಿಯ ಬಡವರಿಗೆ ಲಭ್ಯವಾಗುವಂಥ ಪರಿಹಾರೋಪಾಯಕ್ಕಾಗಿ ಪ್ರಯತ್ನ ಮಾಡುವುದು ಅತ್ಯಗತ್ಯ, ಛಿದ್ರಕಾರಿ, ಮತೀಯವಾದಿ ಶಕ್ತಿಗಳಿಗೆ ಅವಕಾಶ ಮಾಡಿಕೊಡದಂತೆ ಜನರಲ್ಲಿ ತಿಳುವಳಿಕೆ ಉಂಟುಮಾಡಲು, ಜಾತೀಯ ಮತೀಯ ಸೌಹಾರ್ದತೆಯನ್ನು ಉಳಿಸಲು ದುಡಿಯೋಣ.

ಇಥಿಯೋಪಿಯಾ : ಪುನರ್ಜನ್ಮಕ್ಕೆ ಸಿದ್ಧತೆ

(7ನೇ ಪುಟದಿಂದ)

ಸಹಕಾರದೊಂದಿಗೆ ಕಾರ್ಮಿಕರ ಹಾಗೂ ರೈತರ ಸಖ್ಯತೆ ಈ ಪ್ರಭುತ್ವದ ರಾಜಕೀಯ ಆಧಾರ ಎಂದು ಹೇಳಲಾಗಿದೆ. ಪ್ರಭುತ್ವದ ಅತ್ಯುನ್ನತ ಸಂಸ್ಥೆಯಾದ ರಾಷ್ಟ್ರೀಯ ಅಸೆಂಬ್ಲಿಯನ್ನು ನೇರ ಹಾಗೂ ಗುಪ್ತ ಮತದಾನದಿಂದ ಆರಿಸಲಾಗುವುದು. "ದೇಶೀಯ ಪಂಗಡಗಳ ಒಂದು ಸಂಗ್ರಹಾಲಯ" ಎಂದು ಕೆಲವೊಮ್ಮೆ ಕರೆಯಲ್ಪಡುವ ಇಥಿಯೋಪಿಯಾದಲ್ಲಿ 90 ದೇಶೀಯ ಗುಂಪುಗಳಿವೆ. ಇವೆಲ್ಲಕ್ಕೂ ಸಮಾನತೆ ನೀಡುವ ಆಡಳಿತಾತ್ಮಕ ಹಾಗೂ ಸ್ವಾಯತ್ತ ಪ್ರದೇಶಗಳ ಒಂದು ಏಕೀಕೃತ ಪ್ರಭುತ್ವವೆಂದೂ ಕೂಡಾ ಕರಡಿನಲ್ಲಿ ಹೇಳಲಾಗಿದೆ. ದುಡಿಯುವ ಜನಗಳ ಜೀವನ ಹಾಗೂ ಸಾಂಸ್ಕೃತಿಕ ಮಟ್ಟವನ್ನು ಮೇಲಕ್ಕೆತ್ತುವುದು ಪ್ರಭುತ್ವದ ಆರ್ಥಿಕ ಚಟುವಟಿಕೆಯ ಮುಖ್ಯ ಗುರಿ ಎಂದಿರುವ ಈ ಸಂವಿಧಾನದ ಅಂಗೀಕಾರ ಸಮಾಜವಾದ ಕಟ್ಟುವ ಉದ್ದೇಶ ಹೊಂದಿದ ಇಥಿಯೋಪಿಯಾದ ರಾಷ್ಟ್ರೀಯ-ಪ್ರಜಾಪ್ರಭುತ್ವ ಕ್ರಾಂತಿಯ ಹಾದಿಯಲ್ಲಿ ಪ್ರಮುಖ ಹೆಜ್ಜೆಯೆಂದು ಅಭಿಪ್ರಾಯಪಡಲಾಗಿದೆ.

ಈ ಸಂವಿಧಾನದ ಕರಡಿನ ಮೇಲೆ ಇಥಿಯೋಪಿಯಾದ ಮೂಲೆ-ಮೂಲೆಗಳಲ್ಲಿ ನಿಜವಾದ ಅರ್ಥದಲ್ಲಿ ಚರ್ಚೆ ನಡೆಯುತ್ತಿದೆ ಎಂದು 'ನ್ಯೂಟೈಮ್ಸ್' ವರದಿಗಾರರು ತಿಳಿಸಿದ್ದಾರೆ,

ಐಕ್ಯರಂಗಕ್ಕೆ ಚೆಂದಾದಾರರಾಗಿರಿ



ಇತ್ತೀಚೆಗೆ
ನಿಧನರಾದ
ರೈತ - ಕಾರ್ಮಿಕ ನಾಯಕ
ಕಾ|| ಬಿ. ನಾರಾಯಣ

ಕೇವಲ ಚುನಾವಣಾ ಸಂದರ್ಭಸಾಧಕತನ

(ಒಂದನೆ ಪುಟದಿಂದ)

ನೀಡಿ ತನ್ನ ಪಕ್ಷದ ಅಭಿಪ್ರಾಯಗಳನ್ನೇ ಅಲ್ಲಗಳೆದಿದ್ದಾರೆಂದೂ, ಪಶ್ಚಿಮ ಬಂಗಾಲದಲ್ಲಿ ಇನ್ನು ಕೆಲವೇ ತಿಂಗಳಲ್ಲಿ ಬರುವ ವಿಧಾನ ಸಭಾ ಚುನಾವಣೆಯಲ್ಲಿ ಲಾಭ ಪಡೆಯುವಂಥ ಸಂದರ್ಭಸಾಧಕತನವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿಕೆಗಳನ್ನು ನೀಡಿದ್ದಾರೆಂದು ಪಿ. ಬಿ. ಸದಸ್ಯ ಹರಿಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಗೂರ್ಖಾಲ್ಯಾಂಡ್ ಚಳುವಳಿಯ ಮುಖಂಡ ಗೈಸಿಂಗ್ "ಎಲ್ಲಿಂದಲೋ ಸುರಿಯುತ್ತಿರುವ" ಅಪಾರ ಹಣ ಖರ್ಚುಮಾಡಿ ಪ್ರತ್ಯೇಕ ಗೂರ್ಖಾ ರಾಜ್ಯಕ್ಕಾಗಿ ಡಾರ್ಜಿಲಿಂಗ್‌ನಲ್ಲಿ ಹಿಂಸಾತ್ಮಕ ಚಳುವಳಿ ಮೂಲಕ ನಿರಪರಾಧಿ ಜನರ ಕೊಲೆ ಮಾಡಿ, ಸಿ ಪಿ.ಐ. (ಎಂ) ಮುಖಂಡ, ಲೋಕಸಭೆ ಸದಸ್ಯ ಆನಂದಪಾಠಕ್ ಅವರ ಮನೆಗೆ ಬೆಂಕಿ ಹಚ್ಚಿ ಮಕ್ಕಳ ಮೇಲೆ ಅತ್ಯಾಚಾರ ನಡೆಸಿ, ಆನಂದಪಾಠಕ್ ಮತ್ತು ಅವರ ಹೆಂಡತಿಯ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದಾನೆ. ಪ್ರತ್ಯೇಕ ಗೂರ್ಖಾ ರಾಜ್ಯಕ್ಕೆ ಮನ್ನಣೆ ನೀಡಬೇಕೆಂದು ಸಂಯುಕ್ತ ರಾಷ್ಟ್ರ ಸಂಸ್ಥೆ, ನೇಪಾಲದ ರಾಜ, ಅಮೇರಿಕ, ಪಾಕಿಸ್ಥಾನ, ರಶ್ಯಾ ಮೊದಲಾದ ದೇಶಗಳ ಸರಕಾರಗಳಿಗೆ ಪತ್ರ ಬರೆದಿದ್ದಾರೆ. ಹಾಗಿದ್ದರೂ ಕೂಡ ರಾಜಿವ್ ಗಾಂಧಿಯವರು ಈ ದೇಶದ್ರೋಹಿ ಚಳುವಳಿಯನ್ನು "ಸಂವಿಧಾನದ ಆಯಕಟ್ಟಿನೊಳಗೆ" ನಡೆಯುವ ಚಳುವಳಿ ಎಂದು ಹೇಳಿರುವುದು ಅವರ "ಸಂದರ್ಭ ಸಾಧಕತನ"ವನ್ನು ಪ್ರದರ್ಶಿಸುತ್ತದೆ. ಇತರ ಎಲ್ಲಾ ರಾಜಕೀಯ ಪಕ್ಷಗಳು ಪ್ರತ್ಯೇಕ ಗೂರ್ಖಾರಾಜ್ಯಕ್ಕಾಗಿ ನಡೆದಿರುವ ಚಳುವಳಿಯನ್ನು ಖಂಡಿಸುತ್ತಿರುವಾಗ ರಾಜೀವ್ ಗಾಂಧಿಯವರು ತಮ್ಮ ಹೇಳಿಕೆಗಳ ಮೂಲಕ "ಭಯೋತ್ಪಾದಕ ಪ್ರತ್ಯೇಕತಾವಾದಿ" ಚಳುವಳಿಗೆ ಪ್ರೋತ್ಸಾಹ ನೀಡುತ್ತಿರುವುದು ಖಂಡನೀಯ.

ಬಿಂದ್ರನ್‌ವಾಲೆ ರಾಜಕಾರಣಿಯಲ್ಲ ಬರೇ ಸನ್ಯಾಸಿ ಎಂದು ಕೆಲವು ತಿಂಗಳ ಹಿಂದೆ ಇದೇ ರಾಜೀವ್ ಗಾಂಧಿ ಹೇಳಿರಲಿಲ್ಲವೇ ? ಅದ್ದರಿಂದ ಇದೇ ರಾಜೀ[...] ಗಾಂಧಿ ಈಗ ಗೈಸಿಂಗನ ಗೂರ್ಖಾ ರಾಜ್ಯಕ್ಕಾಗಿ ನಡೆದಿರುವ ಪ್ರತ್ಯೇಕ[...] ವಾದಿ ಭಯೋತ್ಪಾದಕ ಚಳುವಳಿ [...] ವಿರೋಧಿ, ಸಂವಿಧಾನ ವಿರೋ[...] ಅಲ್ಲೆಂಬ ಹೇಳಿಕೆಯಿಂದ ಜನ[...] ಮೋಸ ಹೋಗಬಾರದೆಂದು ಪಾಲಿ[...] ಬ್ಯೂರೋ ಜನರನ್ನು ಎಚ್ಚರಿಸಿದೆ.

ಪ್ರತ್ಯೇಕ ಗೂರ್ಖಾ ರಾಜ್ಯಕ್ಕಾ[...] ಡಾರ್ಜಿಲಿಂಗಿನಲ್ಲಿ ಸುಭಾಸ್ ಗೈಸಿಂ[...] ನಡೆಸುತ್ತಿರುವ ಚಳುವಳಿ ರಾ[...] ವಿರೋಧಿಯಲ್ಲೆಂದು ರಾಜೀವ್‌ಗಾಂ[...] ಹೇಳಿರುವುದರಿಂದ, ರಾಷ್ಟ್ರ ವಿಭಜ[...] ವಾದ ಆ ಚಳುವಳಿಗೆ ಪ್ರೋತ್ಸಾ[...] ನೀಡಿದಂತಾಗಿದೆಂದು ಕೇಂದ್ರ ಗೃ[...] ಮಂತ್ರಿ ಭೂಟಾಸಿಂಗ್ ಅವರಿಗೆ [...] ಬಂಗಾಲದ ಮುಖ್ಯಮಂತ್ರಿ ಜ್ಯೋ[...] ಬಸು ತಕರಾರು ಮಾಡಿದಾಗ [...] ಅಭಿಪ್ರಾಯವನ್ನು ಒಪ್ಪಿಕೊಂಡಬೂಟ[...] ಸಿಂಗ್ ಎರಡನೇ ದಿವಸವೇ ತ[...] ಅಭಿಪ್ರಾಯ ಬದಲಾಯಿಸಿಪ. ಬಂಗಾ[...] ಸರಕಾರವನ್ನು ಟೀಕಿಸುವ ಗೂರ್ಖಾ[...] ಲಾಂಡ್ ಚಳುವಳಿಯನ್ನು ಬೆಂಬ[...] ಸುವ ಹೇಳಿಕೆ ನೀಡಿರುವುದು ಖಂ[...] ನೀಯ ಮಾತ್ರವಲ್ಲ, ಎಡರಂಗದ ಸ[...] ಕಾರವನ್ನು ಉರುಳಿಸಲು ಜನರಲ್ಲಿ ಅ[...] ಪ್ರಚಾರ ಮಾಡಲು ಕಾಂಗ್ರೆ ಮಂ[...] ಗಳೂ ಮುಖಂಡರೂ ಎಂಥ ಅಸ್ತ್ರವನ[...] ದರೂ ಉಪಯೋಗಿಸಲು ಹಿಂಜ[...] ಯುವುದಿಲ್ಲೆಂಬುದನ್ನು ಅದು ಸ್ಪ[...] ತೋರ್ಪಡಿಸುತ್ತದೆ.

ಕಳೆದ 9 ವರ್ಷಗಳಿಂದ ತನ್ನ ಕ[...] ವಾರು ಜನಪ್ರಿಯ ಕಾರ್ಯಕ್ರ[...] ಗಳ ಮೂಲಕ ಜನ ಸಾಮಾನ್ಯರ[...] ಅಪಾರ ಬೆಂಬಲ ಪಡೆದು ಮೊ[...] ತಾನೇ ನಡೆದ ನಗರ ಸಭೆ ಚುನಾವ[...] ಗಳಲ್ಲೂ ಉಪಚುನಾವಣೆಗಳಲ್ಲ[...] ಸಿ. ಪಿ. ಐ. (ಎಂ) ಮುಖಂಡತ[...] ಎಡರಂಗದಲ್ಲಿ ವಿಶ್ವಾಸ ವ್ಯಕ್ತಮಾಡ[...] ಪ.ಬಂಗಾಲದ ಜನತೆ. ಕಾಂಗ್ರೆ ಪಕ್ಷ[...] ಅಂತರಿಕ ಜಗಳದಿಂದಾಗಿ ನುಚ[...] ನೂರಾಗಿದೆ. ತನ್ನವರಲ್ಲಿ ಆತ್ಮ ವಿಶ್ವಾ[...] ತುಂಬಲು ಎಡರಂಗ ಸರಕಾರದ ವಿರು[...] ಸುಳ್ಳು ಅಪಪ್ರಚಾರಗೈದು ಮು[...] ರುವ ವಿಧಾನ ಸಭೆ ಚುನಾವಣೆ[...] ಮತಗಳಿಸುವ ಪುರುದ್ದೇಶದಿ[...] ರಾಜೀವ ಗಾಂಧಿ ಸಂದರ್ಭಸಾಧಕರ[...] ಪ್ರತ್ಯೇಕತಾವಾದಿಗಳಿಗೆ, ಛಿದ್ರ ಕಾ[...] ಗಳಿಗೆ, ಭಯೋತ್ಪಾದಕರಿಗೆಲ್ಲ ಬೆಂಬ[...] ನೀಡಿ ಜ್ಯೋತಿ ಬಸು ಸರಕಾರವ[...] ಅವಹೇಳುವನ ಮಾಡುವ ಪ್ರಯತ್ನ[...] ಲ್ಲಿದ್ದಾರೆ. ಕರ್ನಾಟಕ – ಆಂಧ್ರಗಳ[...] ಅವರ ಕುತಂತ್ರ ಜಯಗಳಿಸ[...] ಪಶ್ಚಿಮ ಬಂಗಾಲದ ಜಾಗೃತ ಜ[...] ರಾಜೀವ ಗಾಂಧಿಯವರ ಅಪಪ್ರಚಾ[...] ವನ್ನು ಗಾಳಿಗೆ ತೂರಿ ಕುತಂತ್ರವ[...] ಬಯಲಿಗೆಳೆದು ಎಡರಂಗ ಸರಕಾ[...] ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ[...] ಭಾವುಟವನ್ನು ಎತ್ತಿ ಹಿಡಿಯುವ [...] ವಿಶ್ವಾಸ ಹೊಂದಿದ್ದಾರೆ. ಅದು[...] ಮಾಡಿಯೇ ತೋರಿಸುತ್ತಾರೆ.

ಎನ್. ಕೆ. ಉಪಾಧ್ಯಾಯ

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya